# ಸನಾತನ ಪರಂಪರೆಯಲ್ಲಿ ಗೃಹಸ್ಥ ಜೀವನದ ಆದರ್ಶ

**ಡಾ. ಕೆ. ಅನಂತರಾಮು**

ವೈದಿಕ ಕಾಲದಿಂದ ಬೆಳೆದು ಬಂದ ಸನಾತನ ಪರಂಪರೆಯಲ್ಲಿ ಸುಸಂಸ್ಕೃತವಾದ ರೀತಿಯಲ್ಲಿ ಗೃಹಸ್ಥಜೀವನವನ್ನು ನಡೆಸುವ ವಿಷಯವಾಗಿ ಅತಿಶ್ರೇಷ್ಠವಾದ ಹಲವು ಪದ್ಧತಿಗಳನ್ನು ರೂಪಿಸಲಾಗಿದ್ದು, ಅವು ಸಮಾಜದ ಪ್ರತಿಯೊಬ್ಬರನ್ನು ಪರಮ ಶ್ರೇಯಸ್ಸಿನತ್ತ ಕರೆದೊಯ್ಯುವಲ್ಲಿ ಮಹತ್ವದ ಪಾತ್ರ ವಹಿಸುತ್ತವೆ. ಈ ಕುರಿತು ಇಲ್ಲಿ ವಿವೇಚನೆ ನಡೆಸಿರುವ ಲೇಖಕರು ಕನ್ನಡದ ಪ್ರಸಿದ್ಧ ಬರಹಗಾರರು. ನಿವೃತ್ತ ಪ್ರಾಧ್ಯಾಪಕರಾಗಿರುವ ಅವರು ತಮ್ಮ ಅನೇಕ ಗ್ರಂಥಗಳು ಹಾಗೂ ಲೇಖನಗಳಿಂದ ಈಗಾಗಲೇ ಕನ್ನಡ ಓದುಗರಿಗೆ ಚಿರಪರಿಚಿತರಾಗಿದ್ದಾರೆ. ಉತ್ತಮ ಭಾಷಣಕಾರರೂ ಆಗಿರುವ ಅವರು 'ವಿವೇಕಪ್ರಭ'ದಲ್ಲಿ ಹಲವು ಲೇಖನಗಳನ್ನೂ, ಸರಣಿ ಲೇಖನಗಳನ್ನೂ ಬರೆದಿದ್ದಾರೆ.



## ಗೃಹಸ್ಥಧರ್ಮಕ್ಕೆ ತಳಹದಿಯಾದ ಬ್ರಹ್ಮಚರ್ಯ

**ಜ್ಞಾ**ನಾರ್ಜನೆಗೆಂದು ಗುರುಕುಲವನ್ನು ಪ್ರವೇಶಿಸಿದ ಶಿಷ್ಯನಿಗೆ ಸದ್ಗುರುವು, ಅವನ ವಿದ್ಯೆಯು ಪೂರ್ಣವಾಗುವವರೆಗೆ, ವಿದ್ಯೆ ಕಲಿಸುವುದರ ಜೊತೆಗೆ ಅವನ ಬದುಕನ್ನು ಸಂಪನ್ನಗೊಳಿಸುವ ಉಪದೇಶಗಳನ್ನು ಕೂಡ ನೀಡುತ್ತಲೇ ಇರುತ್ತಾನೆ. ಆದರೆ ವಿದ್ಯಾಭ್ಯಾಸವನ್ನು ಮುಗಿಸಿಕೊಂಡು ಮನೆಗೆ ಮರಳುತ್ತಿರುವ ಶಿಷ್ಯನಿಗೆ ಆ ಸದ್ಗುರುವು ನೀಡುವ ಹಿತನುಡಿಗಳು ಮಾತ್ರ ಮುಂದಿನ ಅವನ ಗೃಹಸ್ಥಜೀವನಕ್ಕೆ ತಳಹದಿಯ ರೂಪದಲ್ಲಿರುತ್ತವೆ. ತೈತ್ತಿರೀಯ ಉಪನಿಷತ್ತಿನಲ್ಲಿ ಆ ವಚನಗಳೆಲ್ಲವೂ ಅತ್ಯಂತ ಮನೋಜ್ಞವಾಗಿ ಮೂಡಿ ಬಂದಿವೆ. ''ಇಲ್ಲಿಂದ ಮನೆಗೆ ತೆರಳುವಾಗ ನೀನು ಆಚಾರ್ಯರಿಗೆ ಸೂಕ್ತವಾದ ಗುರುದಕ್ಷಿಣೆಯನ್ನು ಸಮರ್ಪಿಸಬೇಕು. ಮನೆಯನ್ನು ಸೇರಿದ ಬಳಿಕ, ವಿವಾಹಿತನಾಗಿ ಗೃಹಸ್ಥಾಶ್ರಮವನ್ನು ಪ್ರವೇಶಿಸಬೇಕು, ಒಳ್ಳೆಯ ಸಂತಾನವನ್ನು ಬೆಳೆಸಬೇಕು. ಅಧ್ಯಯನವನ್ನು ಕೈಬಿಡದೆ ಅದನ್ನು ಸ್ವತಂತ್ರವಾಗಿ ಮುಂದುವರಿಸಬೇಕು. ಪ್ರವಚನಾದಿಗಳನ್ನೂ ಮಾಡುತ್ತ, ನೀನು ಕಲಿತ ವಿದ್ಯೆಯನ್ನು ಇತರರಿಗೂ ತಿಳಿಸಿಕೊಡಬೇಕು. ಸತ್ಯವನ್ನೇ ಹೇಳಬೇಕು, ಧರ್ಮವಾದುದನ್ನೇ ಆಚರಿಸಬೇಕು. ಸತ್ಯಮಾರ್ಗ-ಧರ್ಮಮಾರ್ಗಗಳಿಂದಾಗಲಿ, ಮಂಗಳಕರವಾದ ಕರ್ಮಗಳಿಂದಾಗಲಿ ಕದಲಬಾರದು. ದೇವತಾಕಾರ್ಯಗಳನ್ನಾಗಲಿ, ಪಿತೃಕಾರ್ಯಗಳನ್ನಾಗಲಿ ಬಿಡದೆ ಮಾಡಬೇಕು. ಮನೆಗೆ ಬರುವ ಆಚಾರ್ಯರನ್ನೂ ಅತಿಥಿಗಳನ್ನೂ ಆದರದಿಂದ ಸತ್ಕರಿಸಬೇಕು. ತಂದೆತಾಯಿಗಳನ್ನು ದೇವರೆಂದೇ ತಿಳಿದು, ಅವರ ಸೇವೆ ಮಾಡಬೇಕು. ದುಷ್ಕಾರ್ಯಗಳಿಂದ ದೂರವಿರುತ್ತ, ಸತ್ಕಾರ್ಯಗಳನ್ನು ಮಾತ್ರವೇ ಕೈಗೊಳ್ಳಬೇಕು. ದುರಾಚಾರಗಳಿಂದ ದೂರವಿರುತ್ತ, ಸದಾಚಾರಸಂಪನ್ನನಾಗಬೇಕು. ನೀನು ಗಳಿಸುವ ಸಂಪತ್ತಿಗೆ ಅನುಗುಣವಾಗಿ ದಾನಕೊಡಬೇಕು. ಆ ದಾನವನ್ನಾದರೋ ವಿನಯ

ದಿಂದಲೂ ಶ್ರದ್ಧೆಯಿಂದಲೂ ಮಿತ್ರ ಭಾವದಿಂದಲೂ ಭಯಭಕ್ತಿಗಳಿಂದಲೂ ಕೊಡಬೇಕು. ಯಜ್ಞಯಾಗಾದಿ ಕರ್ಮಗಳ ವಿಷಯದಲ್ಲಾಗಲಿ, ಇನ್ನಿತರ ಆಚಾರವಿಚಾರಗಳಲ್ಲಾಗಲಿ, ಸಂದೇಹ ಉಂಟಾದರೆ, ಅನುಭವಶಾಲಿಗಳಾದ ಜ್ಞಾನವಂತರನ್ನು ಕೇಳಿ ತಿಳಿದುಕೊಳ್ಳಬೇಕು. ತಮ್ಮ ಕೆಟ್ಟ ವರ್ತನೆಯಿಂದ ಸಮಾಜದಲ್ಲಿ ಕಳಂಕವನ್ನು ಹೊತ್ತ ಮನುಷ್ಯರೊಡನೆ, ಮಹಾಜನರು ಹೇಗೆ ನಡೆದುಕೊಳ್ಳುತ್ತಾರೋ ಹಾಗೆಯೇ ನೀನೂ ನಡೆದುಕೊಳ್ಳಬೇಕು. ನಾನು ಹೇಳುತ್ತಿರುವ ಈ ಉಪದೇಶದ ಮಾತುಗಳನ್ನು ಪರಮೇಶ್ವರನ ಆಜ್ಞೆಯೆಂದೂ ವೇದವಾಕ್ಯವೆಂದೂ ತಿಳಿದು ಅಳವಡಿಸಿಕೊಳ್ಳಬೇಕು'' ಎಂದು ಸದ್ಗುರುವು ನೀಡಿದ ಉಪದೇಶಾಮೃತವನ್ನು ಶಿಷ್ಯನು ತಲೆಯಲ್ಲಿ ಹೊತ್ತು ಮನೆಗೆ ಹಿಂತಿರುಗಿ ಬರುತ್ತಾನೆ.

## ವಿಶ್ವಮೂಲವಾದ ದಾಂಪತ್ಯ ಜೀವನ

ಸೃಷ್ಟಿಯ ಮೂಲದಲ್ಲಿಯೇ ದಾಂಪತ್ಯ ಜೀವನದ ವಿಕಾಸವಿದೆ ಎಂದು ವೇದಗಳು ತಿಳಿಸಿಕೊಟ್ಟಿವೆ. ವಿಶ್ವಮೂಲವಾದ ಶಕ್ತಿಯು ತನ್ನನ್ನೇ ತಾನು ಎರಡಾಗಿ ವಿಭಾಗಿಸಿಕೊಂಡಿತು. ಬಲಭಾಗದ ಅರ್ಧದಿಂದ ಪುರುಷನಾಗಿಯೂ ಎಡಭಾಗದ ಅರ್ಧದಿಂದ ಸ್ತ್ರೀಯಾಗಿಯೂ ರೂಪತಳೆಯಿತು. ಆ ಸ್ತ್ರೀಪುರುಷರು ವಿವಾಹಿತರಾಗಿ ದಂಪತಿಗಳಾದರು. ಅವರಿಂದ ಸ್ತ್ರೀಪುರುಷರೆನಿಸಿದ ಮನುಷ್ಯರು ಹುಟ್ಟಿದರು. ಅವರಿಂದ ಸೃಷ್ಟಿಯು ಮುಂದುವರಿಯಿತು.



**ಅರ್ಧನಾರೀಶ್ವರ:** ಪುರಾಣಗಳ ಹಿನ್ನೆಲೆಯಲ್ಲಿ ತ್ರಿಮೂರ್ತಿಗಳು ಸೃಷ್ಟಿ ಸ್ಥಿತಿ, ಲಯಗಳಿಗೆ ಒಡೆಯರಾಗಿದ್ದು, ಅವರು ಕೂಡ ಗೃಹಸ್ಥರೇ ಆಗಿದ್ದಾರೆ. ಬ್ರಹ್ಮನು ತನ್ನ ನಾಲಿಗೆಯಲ್ಲಿಯೇ ವಾಗ್ದೇವಿಯಾದ ಸರಸ್ವತಿಗೆ ಜಾಗ ಕೊಟ್ಟಿದ್ದಾನೆ. ವಿಷ್ಣುವು ಲಕ್ಷ್ಮಿಯನ್ನು ತನ್ನ ವಕ್ಷಸ್ಥಲದಲ್ಲಿ ಧರಿಸಿಕೊಂಡಿದ್ದಾನೆ. ಮಹೇಶ್ವರನಾದರೋ ತನ್ನ ಅರ್ಧ ದೇಹವನ್ನೇ ಪಾರ್ವತಿಗಾಗಿ ಕೊಟ್ಟು, ತಾನು ಅರ್ಧನಾರೀಶ್ವರನೆನಿಸಿದ್ದಾನೆ. ವಿಶ್ವಕುಟುಂಬಿಗಳಾದ ಅವರು ಸಂತಾನವನ್ನು ಬೆಳೆಸುವುದರ ಮೂಲಕ ಮಾನವಕುಲದ ದಾಂಪತ್ಯ ಜೀವನಕ್ಕೆ ಮೇಲ್ಪಂಕ್ತಿಯಾಗಿದ್ದಾರೆ.

**ಧನ್ಯೋ ಗೃಹಸ್ಥಾಶ್ರಮಃ :** ಸಂಸಾರದಲ್ಲಿ ಪತಿಪತ್ನಿಯರು ಒಂದು ಪ್ರಾಣ, ಎರಡು ದೇಹ ಎಂಬಂತೆ ಇರಬೇಕು. ಮೋಕ್ಷವೂ ಸೇರಿದಂತೆ ಗೃಹಸ್ಥಧರ್ಮವು ಚತುರ್ವಿಧಪುರುಷಾರ್ಥಗಳನ್ನು ಸಾಧಿಸಿ ಕೊಡುತ್ತದೆ. ಎಲ್ಲ ಜೀವಿಗಳೂ ತಾಯಿಯನ್ನು ಆಶ್ರಯಿಸಿ ಬದುಕುವಂತೆ, ಇತರ ಆಶ್ರಮಗಳೆಲ್ಲ ಗೃಹಸ್ಥಾಶ್ರಮವನ್ನೇ ಆಶ್ರಯಿಸಿ ಬದುಕುತ್ತವೆ. ಆದ್ದರಿಂದ ಗೃಹಸ್ಥಾಶ್ರಮದಲ್ಲಿ ಧನ್ಯತೆಯಿದೆ.

**ರತ್ನಗರ್ಭಾ ವಸುಂಧರಾ:** ಇಹಲೋಕದಲ್ಲಿ ಪರಮಪುರುಷನ ಆಶಯವನ್ನು ಈಡೇರಿಸಲು ಭೂಮಾತೆಯು ಸದಾ ಸರ್ವದಾ ಸನ್ನದ್ಧಳಾಗಿರುತ್ತಾಳೆ. ದವಸಧಾನ್ಯಾದಿಗಳು ಬೇಕೇ, ನವರತ್ನಗಳು ಬೇಕೇ ಎಲ್ಲವನ್ನೂ ಅವಳೇ ಧರಿಸಿಕೊಂಡು ಕೊಡುತ್ತಿರುತ್ತಾಳೆ. ಅಂತೆಯೇ ಗೃಹಿಣಿಯು, ಸ್ತ್ರೀಪುರುಷ ಪ್ರಜೆಗಳನ್ನು ತಯಾರು ಮಾಡುವ ಗೃಹಿಣೀಪಟ್ಟವನ್ನೇರಬೇಕು.

**ಹೆಬ್ಬಾಗಿಲೇ ಮೋಕ್ಷದ್ವಾರ:** ಮನುಷ್ಯನ ಶರೀರವನ್ನು ಭಗವಂತನು ಭೋಗಾಯತನ ಮತ್ತು ಯೋಗಾಯತನ ಎಂಬೆರಡಕ್ಕೂ ಯೋಗ್ಯವಾಗುವಂತೆ ಸೃಷ್ಟಿಸಿದ್ದಾನೆ. ಆಯತನವೆಂದರೆ ಆಶ್ರಯಸ್ಥಾನ. ಧರ್ಮ, ಅರ್ಥ, ಕಾಮಗಳೆಂಬ ತ್ರಿವಿಧ ಪುರುಷಾರ್ಥಗಳನ್ನು ಸಾಧಿಸಲು ಈ ಶರೀರವು ಬಳಕೆಯಾಗುವಾಗ ಅದು ಭೋಗಾಯತನವೆನಿಸುತ್ತದೆ. ಅದೇ ಶರೀರವು ಪರಮಪುರುಷಾರ್ಥವೆನಿಸುವ ಮೋಕ್ಷಸಾಧನೆಗಾಗಿ ಕೂಡ ಬಳಕೆಯಾಗುತ್ತದೆಯಾದ್ದರಿಂದ, ಯೋಗಾಯತನವೆನಿಸುತ್ತದೆ. ಗೃಹಸ್ಥನು ವಾಸಮಾಡುವ ಮನೆಯು ಕೂಡ ಅವನ ಭೋಗಜೀವನ ಮತ್ತು ಯೋಗಜೀವನವೆಂಬೆರಡಕ್ಕೂ ಅನ್ವಯವಾಗುವಂತೆ ಇರಬೇಕು. ಮನುಷ್ಯ ದೇಹದ ಅಂಗಾಂಗಗಳನ್ನು ಬೇರೆ ಬೇರೆ ಅಭಿಮಾನಿ ದೇವತೆಗಳು ಕಾಪಾಡುವಂತೆಯೇ ಮನೆಯ ವಿವಿಧ ಭಾಗಗಳನ್ನು, ವಿವಿಧ ದೇವತೆಗಳು ಕಾಪಾಡುತ್ತಾರೆ. ಮನೆಯ ಹೆಬ್ಬಾಗಿಲಾದರೋ ಮೋಕ್ಷದ್ವಾರವೆಂದೇ ಕೀರ್ತಿತವಾಗಿದೆ.

## ವಿವಾಹವೆಂಬ ಪವಿತ್ರ ಸಂಸ್ಕಾರ

ಗುರುಕುಲದಿಂದ ಮನೆಗೆ ಬಂದ ಬ್ರಹ್ಮಚಾರಿಯು ಸ್ನಾತಕನೆನಿಸಿ ವಿವಾಹಕ್ಕೆ ಯೋಗ್ಯನಾಗುತ್ತಾನೆ. ವಿವಾಹವಂತೂ ಅತ್ಯಂತ ಪವಿತ್ರವಾದ ಸಂಸ್ಕಾರ. ಕನ್ಯಾಪಿತೃವು ಕನ್ಯಾದಾನ ಮಾಡುವಾಗ ''ಈ ಪಂಚಭೂತಗಳೂ ಸಮಸ್ತದೇವತೆಗಳೂ ನನ್ನ ಈ ಕನ್ಯಾದಾನಕ್ಕೆ ಸಾಕ್ಷಿಯಾಗಿದ್ದಾರೆ. ಲಕ್ಷ್ಮೀಸ್ವರೂಪಳಾದ ಈಕೆಯನ್ನು ನಾರಾಯಣಸ್ವರೂಪನಾದ ನಿನಗೆ ಕೊಡುತ್ತಿದ್ದೇನೆ. ನೀನು ಸಂತಾನವಂತನಾಗಿ ಮುಂದಕ್ಕೆ ಬ್ರಹ್ಮಲೋಕವನ್ನು ಪಡೆಯಲು ಈಕೆ ನಿನಗೆ ಸಹಾಯಕಾರಿಯಾಗುತ್ತಾಳೆ'' ಎಂದು ಹೇಳುತ್ತಾನೆ. 'ಅಳಿಯ'(=ಅಳಿಯದವನು) ಎಂಬ ಕನ್ನಡ ಶಬ್ದವಂತೂ ಪುರುಷನಿಗಿರುವ, ನಾಶವಾಗದ ಅಚ್ಯುತ ಸ್ವರೂಪವನ್ನು ಪ್ರತಿಬಿಂಬಿಸುವಂತಿದೆ.

**ಸಪ್ತಪದಿ:** ವಿವಾಹಕಾಲದಲ್ಲಿ ಜರುಗುವ 'ಸಪ್ತಪದಿ'ಎಂಬ ಆಚರಣೆಯಂತೂ ದಾಂಪತ್ಯಜೀವನದ ಧ್ಯೇಯೋದ್ದೇಶಗಳನ್ನೆಲ್ಲ ಸಾರಪೂರ್ಣವಾಗಿ ತನ್ನಲ್ಲಿ ಕೂಡಿಟ್ಟುಕೊಂಡಿದೆ. ''ನಾವು ಒಟ್ಟಿಗೇ ಏಳುಹೆಜ್ಜೆಗಳನ್ನಿಟ್ಟು ಪರಸ್ಪರ ಗೆಳೆಯರಾಗೋಣ. ಧರ್ಮ, ಅರ್ಥ, ಕಾಮಗಳೆಂಬ ತ್ರಿವರ್ಗವನ್ನು ನಾನು ನಿನ್ನೊಡಗೂಡಿ ಸಾಧಿಸುತ್ತೇನೆಯೇ ವಿನಹ, ನಿನ್ನನ್ನು ಮೀರಿ ಹೋಗುವುದಿಲ್ಲ'' ಎಂದು ಪುರುಷನು ಪ್ರತಿಜ್ಞೆ ಮಾಡುತ್ತಾನೆ. ಸಪ್ತಧಾತುಗಳಿಂದಾದ ಶರೀರವನ್ನು ಸಾಧನವನ್ನಾಗಿ ಮಾಡಿಕೊಂಡು, ಸಪ್ತದ್ವೀಪಗಳಿಂದ

ಸುತ್ತುವರಿದ ಭೂಲೋಕದಿಂದ ಮೇಲಕ್ಕೆ ಸಪ್ತಲೋಕಗಳ ಹಾದಿಯಲ್ಲಿ ಸಾಗುತ್ತ ಸತ್ಯಲೋಕವನ್ನು ಸೇರಬೇಕೆಂಬುದೇ ಆ ಸಪ್ತಪದಿಯ ಸಂಕೇತ. ಮೂಲಾಧಾರ, ಸ್ವಾಧಿಷ್ಠಾನ, ಮಣಿಪೂರ, ಅನಾಹತ, ವಿಶುದ್ಧ, ಆಜ್ಞಾ ಮತ್ತು ಸಹಸ್ರಾರ ಎಂಬಂತಿರುವ ಶರೀರದ ಏಳು ಚಕ್ರಗಳನ್ನು ಯೋಗಮಾರ್ಗದಿಂದ ದಾಟಿ ಬ್ರಹ್ಮಲೋಕವನ್ನು ಸೇರಲು ಸತಿಯು ಸಹಾಯಕಳಾಗುತ್ತಾಳೆಂಬುದೇ ಸಪ್ತಪದಿಯ ಸಂದೇಶ. ಆ ದಂಪತಿಗಳು ತಮ್ಮ ಕಾರ್ಯ ಸಾಧನೆಗಾಗಿ ಸಪ್ತ ಋಷಿಗಳ ಆಶೀರ್ವಾದಗಳನ್ನೂ ಬೇಡುತ್ತಾರೆ. ಅದೆಲ್ಲವೂ ಸಪ್ತಜಿಹ್ವನೆನಿಸಿದ ಅಗ್ನಿದೇವನ ಸಾಕ್ಷಿತ್ವದಲ್ಲಿ ಸಂಪನ್ನಗೊಳ್ಳುತ್ತದೆ.

**ದ್ಯಾವಾಪೃಥ್ವಿಗಳು:** 'ಗೋಭಿಲಗೃಹ್ಯಸೂತ್ರ'ದಲ್ಲಿ ವಿವಾಹ ಕಾಲದಲ್ಲಿ ಪುರುಷನು ಮಾಡುವ ಪ್ರತಿಜ್ಞೆಗಳು ಗೃಹಸ್ಥಜೀವನದ ಕೈಗನ್ನಡಿಯಂತಿವೆ. ''ನಿನ್ನ ಹೃದಯವೇ ನನ್ನ ಹೃದಯವಾಗಲಿ, ನನ್ನ ಹೃದಯವೇ ನಿನ್ನ ಹೃದಯವಾಗಲಿ. ನಾನು ದ್ಯುಲೋಕವಾಗಿದ್ದೇನೆ, ನೀನು ಪೃಥ್ವಿಯಾಗಿದ್ದೀಯೆ, ನಾನು ರೇತಸ್ಸಾಗಿದ್ದೇನೆ, ನೀನು ಅದನ್ನು ಧರಿಸುವವಳಾಗಿದ್ದೀಯೆ. ನಾನು ಸಾಮವಾಗಿದ್ದೇನೆ, ನೀನು ಋಕ್ಕುಗಳಾಗಿದೀಯೆ. ನೀನು ನನ್ನನ್ನು ಅನುಸರಿಸುವವಳಾಗು'' ಎಂಬ ಉದ್ಗಾರಗಳು ಅಲ್ಲಿವೆ.

**'ಆತ್ಮಾ ವೈ ಪುತ್ರ ನಾಮಾಸಿ':** ಪುರುಷನು ಸ್ತ್ರೀಗರ್ಭದಲ್ಲಿ ತನ್ನ ಆತ್ಮವನ್ನೇ ಬೆಳೆಸಿಕೊಳ್ಳುತ್ತಾನೆ ಎಂಬ ವಾಕ್ಯವೊಂದಿದೆ. ಅಂತಹ ಗೃಹಿಣಿಯ ಗರ್ಭಕೋಶವೂ ಜ್ಞಾನಕೋಶವೂ ಆಗುತ್ತದೆ. ಲೋಕದಲ್ಲಿ ಒಬ್ಬ ತಾಯಿ, ಒಂದು ಮಗುವನ್ನು ಬೆಳೆಸಿದರೆ, ಮುಂದಕ್ಕೆ ಆ ಮಗುವೇ ಗೃಹಸ್ಥನಾಗಿ ಭಗವಂತನ ಆಜ್ಞೆಗೆ ವಿರೋಧವಿಲ್ಲದಂತೆ ಸಂತಾನದ ಬಳ್ಳಿಯನ್ನು ಹಬ್ಬಿಸುತ್ತದೆ. ಅದನ್ನು ಕಂಡು ಎಲ್ಲ ದೇವತೆಗಳೂ ನಲಿದಾಡುತ್ತಾರೆ.

**'ಗೃಹಿಣೀ ಗೃಹಮುಚ್ಯತೇ':** ನಮ್ಮ ಪರಂಪರೆಯಲ್ಲಿ ಗೃಹಿಣಿಯನ್ನೇ ಗೃಹವೆಂದೂ ಕರೆಯಲಾಗಿದೆ. ಪರಮಾತ್ಮನ ಆಶಯದಂತೆ, ಪತಿಯ ಆತ್ಮವನ್ನು ತನ್ನ ಗರ್ಭದಲ್ಲಿ ಧರಿಸಿ ಬೆಳೆಸುವ ಗೃಹಿಣಿಗೆ ಗೃಹವೆಂಬ ಸ್ಥಾನವನ್ನು ಕೊಟ್ಟಿರುವುದು ಸೂಕ್ತವಾಗಿದೆ. ಹೀಗಾಗಿ ಅವಳ ಮನೋಧರ್ಮಕ್ಕನುಗುಣವಾಗಿಯೇ ಗೃಹವೂ ಇರುತ್ತದೆ. ಪ್ರತಿಯೊಂದು ದಿಕ್ಕಿಗೂ ಎರಡೆರಡರಂತೆ ಮನೆಗೆ ಪ್ರಧಾನವಾಗಿ ಎಂಟು ಕಂಬಗಳಿರಬೇಕು, ಆ ಕಂಬಗಳನ್ನು ಪೂರ್ವಕ್ಕೆ ಬ್ರಹ್ಮ ಮತ್ತು ಕ್ಷತ್ರ, ಪಶ್ಚಿಮಕ್ಕೆ ಅನ್ನ ಮತ್ತು ಜಲ, ಉತ್ತರಕ್ಕೆ ಮಿತ್ರ ಮತ್ತು ವರುಣ, ದಕ್ಷಿಣಕ್ಕೆ ಯಜ್ಞ ಮತ್ತು ದಕ್ಷಿಣೆ ಎಂಬ ದೇವತೆಗಳು ಕಾಪಾಡುತ್ತಾರೆ. ಮಧ್ಯದ ಕಂಬವು ಧರ್ಮಸ್ತಂಭವೆನಿಸುತ್ತದೆ. ಉಪಸ್ತಂಭಗಳೂ ಇರುತ್ತವೆ. ಮನೆಯನ್ನು ಹೊರುವ ಆ ಕಂಬಗಳೆಲ್ಲವೂ ದಾಂಪತ್ಯ ಜೀವನವನ್ನು ಹೊರುವ ಕಂಬಗಳೇ ಆಗಿವೆ. ಮುಂಬಾಗಿಲು ಹಿಂಬಾಗಿಲುಗಳು ಹಗಲು ರಾತ್ರಿಗಳನ್ನು ಪ್ರತಿನಿಧಿಸುತ್ತವೆ. ಬದುಕೊಂದು ಯಜ್ಞರೂಪವಾಗಿ ಜ್ಞಾನವೃಕ್ಷ ಮತ್ತು ವಂಶವೃಕ್ಷಗಳೆರಡೂ ಅಲ್ಲಿ ಅಭಿವೃದ್ಧಿ ಹೊಂದುತ್ತವೆ. ಅಂತಹ ಗೃಹವನ್ನು ಆ ದಂಪತಿಗಳು ಅಷ್ಟ ಮಂಗಲದ್ರವ್ಯಗಳ ಸಹಿತವಾಗಿ ಪ್ರವೇಶಮಾಡುತ್ತಾರೆ. ಅಲ್ಲಿ ಅವರಿಗೆ ಸಪ್ತಪದಿಯ ಹೊತ್ತಿನಲ್ಲಿ ಕೋರಿಕೊಂಡ ಅನ್ನ, ಬಲ, ವ್ರತ, ಸುಖ, ಪಶುಗಳು, ಸಂಪತ್ತು ಹೋತ್ರಗಳು ಎಂಬ ಸಪ್ತಸಿರಿಗಳೂ ಪ್ರಾಪ್ತವಾಗುತ್ತದೆ.

**ಕನ್ಯಾದಾನದ ಮಹಿಮೆ:** ದಾನದಾನಗಳಲ್ಲೆಲ್ಲ ಕನ್ಯಾದಾನವೇ ಅತ್ಯಂತ ಶ್ರೇಷ್ಠವಾದುದೆಂದು ಸ್ಮೃತಿಕಾರರು ಎತ್ತಿಹಿಡಿದಿದ್ದಾರೆ. ಅದರ ಹಿರಿಮೆಯನ್ನು ಹೇಳಿರುವ ಪರಿ ನಮ್ಮ ಕಲ್ಪನೆಗೆ ಮೀರಿದುದಾಗಿದೆ. ಭೂಮಿಯಿಂದ ಸೂರ್ಯಮಂಡಲದವರೆಗೆ ಎಳ್ಳನ್ನು ರಾಶಿಹಾಕಬೇಕು. ಆ ಬಳಿಕ ವರ್ಷಕ್ಕೊಂದರಂತೆ ಒಂದೊಂದೇ ಎಳ್ಳು ಕಾಳನ್ನೆತ್ತಿ, ಬೇರೆ ಜಾಗಕ್ಕೆ ರಾಶಿಹಾಕಬೇಕು. ಅದು ಪೂರ್ಣಗೊಳ್ಳಲು ಎಷ್ಟು ವರ್ಷಗಳೋ ಅಷ್ಟು ವರ್ಷಗಳ ಕಾಲ ಕನ್ಯಾದಾನ ಮಾಡಿದ ತಂದೆತಾಯಿಗಳು ಸ್ವರ್ಗಲೋಕದಲ್ಲಿದ್ದುಕೊಂಡು, ಸಕಲ ಭೋಗಗಳನ್ನೂ ಅನುಭವಿಸುತ್ತಾರೆಂದು ತಿಳಿಸಿಕೊಟ್ಟಿದ್ದಾರೆ. ತಮಗೆ ಹೆಣ್ಣುಮಕ್ಕಳಿಲ್ಲದಿದ್ದರೆ, ಬೇರೊಬ್ಬರ ಹೆಣ್ಣು ಮಗಳನ್ನಾದರೂ ಬೇಡಿ ಪಡೆದು, ತಮ್ಮ ಪುತ್ರಿಯೆಂದೇ ಭಾವಿಸಿ, ತಮ್ಮ ವೆಚ್ಚದಲ್ಲಿ ಕನ್ಯಾದಾನವನ್ನು ನೆರವೇರಿಸಬೇಕು. ವಿವಾಹದಲ್ಲಿ ವರನ ಪಕ್ಷದಿಂದ ಏನನ್ನೂ ತೆಗೆದುಕೊಳ್ಳಬಾರದು. ತೆಗೆದುಕೊಂಡರೆ ಕನ್ಯಾದಾನದ ಫಲವು ನಷ್ಟವಾಗುತ್ತದೆ.

**ಎಂಟು ನಿತ್ಯಕರ್ಮಗಳು:** ಸ್ನಾನ, ಸಂಧ್ಯಾವಂದನೆ, ಗಾಯತ್ರಿ ಜಪ, ಹೋಮಕಾರ್ಯ, ದೇವಪೂಜೆ, ಅತಿಥಿಸತ್ಕಾರ, ವೈಶ್ವದೇವ, ಬ್ರಹ್ಮಯಜ್ಞ ಎಂಬೀ ಎಂಟು ನಿತ್ಯಕರ್ಮಗಳನ್ನು ಗೃಹಸ್ಥರು ನೆರವೇರಿಸಬೇಕು. ಮೊದಲ ಆರು ನಿತ್ಯಕರ್ಮಗಳನ್ನು ಹೆಚ್ಚು ವಿವರಿಸಬೇಕಾಗಿಲ್ಲ. ವೈಶ್ವದೇವ ಮತ್ತು ಬ್ರಹ್ಮಯಜ್ಞಗಳು ಮಹತ್ವಪೂರ್ಣವಾಗಿವೆ. ಗೃಹಸ್ಥರಾದ ದಿನದಿಂದ ಮನೆಯಲ್ಲಿ ತಾವು ಕಾಪಾಡಿಕೊಂಡು ಬಂದ ಅಗ್ನಿಗೆ ವಿಶೇಷವಸ್ತುಗಳನ್ನು ಸಮರ್ಪಿಸಿ ಮಾಡುವ ಆರಾಧನೆಯು 'ವೈಶ್ವದೇವ' ಎಂದೆನಿಸುತ್ತದೆ. ಬ್ರಹ್ಮಯಜ್ಞದಲ್ಲಿ ದೇವಯಜ್ಞ, ಪಿತೃಯಜ್ಞ, ಭೂತಯಜ್ಞ, ಮನುಷ್ಯಯಜ್ಞ ಮತ್ತು ಬ್ರಹ್ಮಯಜ್ಞ ಎಂಬ ಐದು ಆಚರಣೆಗಳು ಬೆಸೆದುಕೊಂಡಿವೆ. ಮನುಷ್ಯರು ತಮ್ಮ ಜೀವಿತಕಾಲದಲ್ಲಿ ದೇವತೆಗಳಿಂದಲೂ ಪೂರ್ವಜರಾದ ಪಿತೃದೇವತೆಗಳಿಂದಲೂ ಭೂತಕೋಟಿಯೊಳಗೆ ಸೇರುವ ಪ್ರಾಣಿಪಕ್ಷಿಗಳಿಂದಲೂ, ಮನುಷ್ಯ



ರಿಂದಲೂ ಬ್ರಹ್ಮಜ್ಞರೆನಿಸಿದ ಋಷಿಮುನಿಗಳಿಂದಲೂ ಉಪಕಾರ ಪಡೆದಿರುತ್ತಾರೆ. ಆ ಉಪಕಾರದ ಹೊರೆಯನ್ನು 'ಋಣ' ಎಂದು ಕರೆಯುತ್ತಾರೆ. ದೇವಯಜ್ಞಾದಿಗಳ ಮೂಲಕ ಆ ಋಣವನ್ನು ತೀರಿಸಲೇಬೇಕು.

**ಪಂಚಯಜ್ಞಗಳು:** ಇಂದ್ರ, ಸೂರ್ಯ ಮೊದಲಾದ ದೇವತೆಗಳು, ಮಳೆಬೆಳೆಗಳ ಮೂಲಕ ನಮಗೆ ಸುಖಸಮೃದ್ಧಿಗಳನ್ನು ದಯಪಾಲಿಸುತ್ತಾರೆ. ಆದ್ದರಿಂದ ಅವರಿಗೆ ಅಗ್ನಿಮುಖದಿಂದ ಹವಿಸ್ಸುಗಳನ್ನರ್ಪಿಸಿ 'ದೇವಯಜ್ಞ'ದ ಮೂಲಕ ಅವರನ್ನು ಸಂತೋಷಪಡಿಸಬೇಕು. ಪಿತೃದೇವತೆಗಳಿಗೆ ಜಲತರ್ಪಣ ನೀಡುವುದು ಮುಂತಾದ ಕ್ರಿಯಾಕಲಾಪಗಳ ಮೂಲಕ ಅವರನ್ನು ತೃಪ್ತಿಪಡಿಸಿ, ಅವರ ಕೃಪಾಶೀರ್ವಾದಗಳಿಗೆ ಪಾತ್ರರಾಗುವುದು 'ಪಿತೃಯಜ್ಞ'ವೆನಿಸುತ್ತದೆ. ನಾವು ಸಾಕಿದ ಗೋವು ಮುಂತಾದ ಪ್ರಾಣಿಗಳಿಗೆ ಮತ್ತು ಲೋಕದ ಇನ್ನಿತರ ಪ್ರಾಣಿಪಕ್ಷಿಗಳಿಗೆ ಆಹಾರ ನೀಡುವುದೇ 'ಭೂತಯಜ್ಞ' ವೆನಿಸುತ್ತದೆ. 'ಮನುಷ್ಯಯಜ್ಞ'ವೆಂಬುದು ಹಸಿದು ಬಂದ ಅತಿಥಿಗಳಿಗೆ, ಜಾತಿಭೇದವೆಣಿಸದೆ ಅನ್ನ ನೀರುಗಳನ್ನಿತ್ತು ಸಂತೈಸುವುದೇ ಆಗಿದೆ. ವೇದಮಂತ್ರಗಳನ್ನು ಸಾಕ್ಷಾತ್ಕರಿಸಿಕೊಟ್ಟ ನಮ್ಮ ಋಷಿಮುನಿಗಳನ್ನು ಆರಾಧಿಸುವುದು ಋಷಿಯಜ್ಞ ಅಥವಾ 'ಬ್ರಹ್ಮಯಜ್ಞ'ವೆನಿಸುತ್ತದೆ. ಆ ಮಹಾತ್ಮರು ಕರುಣಿಸಿದ ವೇದಮಂತ್ರಗಳನ್ನು ಗೃಹಸ್ಥರು ಪಾರಾಯಣ ಮಾಡಿದರೆ ಅವುಗಳನ್ನು ತಮ್ಮ ಮಕ್ಕಳಿಗೂ ಶಿಷ್ಯರಿಗೂ ಕಲಿಸಿಕೊಟ್ಟರೆ, ಅದರಿಂದ ಆ ಋಷಿಗಳು ತೃಪ್ತರಾಗುತ್ತಾರೆ.

**ಚತುರ್ವಿಧ ಕರ್ಮಗಳು:** ಕರ್ಮಗಳನ್ನು ನಿತ್ಯಕರ್ಮ, ನೈಮಿತ್ತಿಕ ಕರ್ಮ, ಕಾಮ್ಯಕರ್ಮ ಮತ್ತು ನಿಷ್ಕಾಮಕರ್ಮ ಎಂದು ಶಾಸ್ತ್ರಗಳು ವರ್ಣಿಸಿವೆ. ಗೃಹಸ್ಥರು ಈ ನಾಲ್ಕನ್ನೂ ಆಚರಿಸಬೇಕು. ಈ ಮೇಲೆ ನಿತ್ಯಕರ್ಮಗಳನ್ನು ನೋಡಿದೆವು. ಒಂದಾನೊಂದು ಕಾರಣವು ಕೂಡಿ ಬಂದು ಮಾಡಬೇಕಾಗಿರುವ ಕರ್ಮವು ನೈಮಿತ್ತಿಕ ಕರ್ಮವೆನಿಸುತ್ತದೆ. ಪಿತೃಶ್ರಾದ್ಧಗಳು, ತರ್ಪಣಗಳು, ಪರ್ವಗಳು, ವ್ರತಗಳು–ನಿಮಿತ್ತಗಳು ಕೂಡಿಬಂದಾಗ ಗೃಹಸ್ಥನು ಆಚರಿಸಬೇಕಾಗಿರುವುದರಿಂದ ಅವು 'ನೈಮಿತ್ತಿಕ ಕರ್ಮ'ಗಳೆನಿಸುತ್ತವೆ. ಕಾಮ್ಯಕರ್ಮದಲ್ಲಿ ಇಷ್ಟಕರ್ಮ ಮತ್ತು ಪೂರ್ತಕರ್ಮ ಎಂಬೆರಡು ವಿಧಗಳಿವೆ. ಯಾವುದೋ ಒಂದು ಇಷ್ಟಾರ್ಥವು ಈಡೇರಬೇಕು ಎಂದು ಸಂಕಲ್ಪಿಸಿ ಮಾಡುವ ಕರ್ಮವು ಕಾಮ್ಯಕರ್ಮವೆನಿಸಿ, ಅದರಲ್ಲಿ ಯಜ್ಞಯಾಗಾದಿಗಳು 'ಇಷ್ಟಕರ್ಮ'ದ ಗುಂಪಿಗೆ ಸೇರುತ್ತವೆ. ಕೆರೆಬಾವಿಗಳನ್ನು ಕಟ್ಟಿಸುವುದು, ಉದ್ಯಾನವನಗಳನ್ನು ಬೆಳೆಸುವುದು, ದೇವಾಲಯಗಳನ್ನು ನಿರ್ಮಿಸುವುದು, ಸತ್ಪಾತ್ರರಿಗೆ ಅನ್ನದಾನ, ವಸ್ತ್ರದಾನ, ದ್ರವ್ಯದಾನಾದಿಗಳನ್ನು ಮಾಡುವುದು, ರೋಗಿಗಳ ಮತ್ತು ಹಿರಿಯರ ಸೇವೆ ಮಾಡುವುದು ಮುಂತಾದವು 'ಪೂರ್ತಕರ್ಮ'ವೆನಿಸುತ್ತವೆ. ಅವುಗಳಿಂದ ಪುಣ್ಯಸಂಚಯವಾಗಿ ಸ್ವರ್ಗಲೋಕವು ಲಭಿಸುತ್ತದೆ. ಯಾವುದೇ ಕರ್ಮವನ್ನು ಮಾಡಿದರೂ ''ಅದರ ಫಲವು ನನಗೆ ಬೇಡ, ಪರಮಾತ್ಮನಿಗೆ ಸಮರ್ಪಿತವಾಗಲಿ'' ಎಂಬ ಈಶ್ವರಾರ್ಪಣ ಬುದ್ಧಿಯಿಂದ ಮಾಡುವ ಕರ್ಮವು 'ನಿಷ್ಕಾಮಕರ್ಮ'ವೆನಿಸುತ್ತದೆ. ಅದನ್ನೇ ಭಗವದ್ಗೀತೆಯಲ್ಲಿ 'ಕರ್ಮಯೋಗ'ವೆಂದು ಉಪದೇಶಿಸಲಾಗಿದೆ. ಅದು ಮೋಕ್ಷಕ್ಕೆ ದಾರಿಮಾಡಿಕೊಡುತ್ತದೆ. ಮೇಲೆ ಹೇಳಿದ ಕರ್ಮಗಳನ್ನಾಗಲಿ ಮುಂದೆ ಹೇಳುವ ಷಟ್ಕರ್ಮಗಳನ್ನಾಗಲಿ, ಸನಾತನ ಸಂಪ್ರದಾಯದ ಎಲ್ಲ ವರ್ಣದವರೂ ತಮ್ಮ ವರ್ಣಕ್ಕೆ ಹೇಳಿದ ರೀತಿಯಲ್ಲಿ ಆಚರಿಸುತ್ತಾರೆ.

**ಷಟ್ಕರ್ಮಗಳು:** ಅಧ್ಯಯನ, ಅಧ್ಯಾಪನ, ಯಜನ, ಯಾಜನ, ದಾನ, ಪ್ರತಿಗ್ರಹ ಎಂಬವೇ ಷಟ್ಕರ್ಮಗಳು. ಗುರುಕುಲದಲ್ಲಿ ಕಲಿತ ವಿದ್ಯೆಯನ್ನು ಗೃಹಸ್ಥರಾದ ಬಳಿಕವೂ ಸ್ವಾಧ್ಯಾಯದ ಮೂಲಕ ಮುಂದುವರಿಸಿಕೊಂಡು ಹೋಗುವುದು 'ಅಧ್ಯಯನ'ವೆನಿಸುತ್ತದೆ. ಅದನ್ನು ಶಿಷ್ಯರಿಗೆ ಹೇಳಿಕೊಡುತ್ತ ಮುನ್ನಡೆದರೆ ಅದು 'ಅಧ್ಯಾಪನ'ವೆನಿಸುತ್ತದೆ. ಗೃಹಸ್ಥರು ತಾವು ಯಜ್ಞಯಾಗಾದಿಗಳನ್ನು ಮಾಡುವುದು 'ಯಜನ'ವೆಂದೂ, ತಾವು ಪುರೋಹಿತರಾಗಿ ಮಾಡಿಸುವುದು 'ಯಾಜನ'ವೆಂದೂ ಪ್ರಸಿದ್ಧವಾಗಿದೆ. ಷೋಡಶಸಂಸ್ಕಾರಗಳ ಹೊತ್ತಿನಲ್ಲಾಗಲಿ, ಮಿಕ್ಕ ವ್ರತ ನಿಯಮಗಳ ಸಂದರ್ಭದಲ್ಲಾಗಲಿ, ಧನಧಾನ್ಯಗಳನ್ನು ಋತ್ವಿಜರಿಗೂ ಮಿಕ್ಕವರಿಗೂ ನೀಡುವುದು 'ದಾನ'ವೆನಿಸಿ ಸಮಯಾನುಸಾರ ತಾವೂ ದಾನಗಳನ್ನು ಸ್ವೀಕರಿಸುವುದು 'ಪ್ರತಿಗ್ರಹ'ವೆನಿಸುತ್ತದೆ.

## ಗೃಹಸ್ಥರಿಗೆ ವೇದೋಪದೇಶ

ಎತ್ತು, ಕುದುರೆ ಮೊದಲಾದವು ಬ್ರಹ್ಮಚರ್ಯ ಹಾಗೂ ಸರಳ ಆಹಾರನಿಯಮಗಳಿಂದ ಬಲಿಷ್ಠವೂ ಶೀಘ್ರಗಾಮಿಗಳೂ ಆಗಿರುತ್ತದೆ. ಹುಲ್ಲನ್ನು ತಿಂದರೂ ಬಲಿಷ್ಠವಾದ ಸಂತಾನವನ್ನು ಉತ್ಪತ್ತಿ ಮಾಡುತ್ತವೆ. ಅಂತೆಯೇ ಬ್ರಹ್ಮಚಾರಿ–ಬ್ರಹ್ಮಚಾರಿಣಿಯರು ವಿದ್ಯಾವಂತರಾಗಿ ಪೂರ್ಣಯೌವನಕ್ಕೆ ಬಂದ ಬಳಿಕ (ವರನಿಗೆ ೨೫ ವರ್ಷ, ವಧುವಿಗೆ ೧೮ ವರ್ಷ) ತಮಗೆ ಅನುರೂಪರಾದವರನ್ನು ವರಿಸಿ, ''ನಾನು ಈಶ್ವರನ ಸಂಕಲ್ಪವರಿತು ಅವನ ಪ್ರೀತಿಗಾಗಿ ಬಾಳುತ್ತೇನೆ'' ಎಂಬ ನಿಶ್ಚಯದಿಂದ, ವಿಕಾರಗಳಿಗೆ ಸಿಲುಕದೆ, ನಿಯಮಪೂರ್ವಕವಾಗಿ, ಶಕ್ತಿಶಾಲಿಗಳೂ ಸುಶೀಲರೂ ಆದ ಮಕ್ಕಳನ್ನು ಪಡೆಯಬೇಕು. ಪತ್ನಿಯು ತನ್ನ ಪತಿಯೊಂದಿಗೆ ಜೇನಿನಂತೆ ಮಧುರವೂ ಶಾಂತಿದಾಯಕವೂ ಆದ ಮಾತುಗಳನ್ನೇ ಆಡಬೇಕು. ಸೋದರಸೋದರಿಯರು ಒಬ್ಬರನ್ನೊಬ್ಬರು ದ್ವೇಷಿಸದೆ, ಏಕಮತರಾಗಿ, ಏಕವ್ರತರಾಗಿ ಶುಭನುಡಿಗಳನ್ನಾಡುತ್ತ ಸುಖಕ್ಕೆ ಪಾತ್ರರಾಗಬೇಕು.

**ವೇದಾನುಕೂಲವಾದ ಮಾರ್ಗ:** ಗೃಹಸ್ಥನು ತನ್ನ ತಂದೆತಾಯಿಗಳಿಗೆ ಅನುಕೂಲನಾಗಿರುತ್ತ ಅವರ ಸೇವೆ ಮಾಡಬೇಕು. ಬಂಧುಬಳಗದವರ ಕ್ಷೇಮವನ್ನು ಗಮನಿಸಬೇಕು. ಗೋವು ಮುಂತಾದ ಪ್ರಾಣಿಗಳನ್ನು ರಕ್ಷಿಸಬೇಕು. ಅವಿದ್ಯೆಯ ನಾಶಕ್ಕಾಗಿ ಮತ್ತು ಅಭಿವೃದ್ಧಿಗಾಗಿ ಅವನು ಶ್ರಮಿಸಬೇಕು. ತನ್ನ ಉನ್ನತಿಯಿಂದಷ್ಟೇ ಅವನು ಸಂತುಷ್ಟನಾಗಬಾರದು. ಸರ್ವರ ಉನ್ನತಿಯಲ್ಲಿಯೇ ತನ್ನ ಉನ್ನತಿಯೂ ಸಮಾವೇಶಗೊಂಡಿದೆಯೆಂದು

ತಿಳಿಯಬೇಕು. ತಂದೆತಾಯಿಗಳು ತಮ್ಮ ಮಕ್ಕಳಿಗೆ ಉತ್ತಮ ಜ್ಞಾನವನ್ನು ನೀಡುತ್ತ, ಅವರಿಗೆ ಶುಭಕರ್ಮಗಳತ್ತಲೇ ಒಲವು ಉಂಟಾಗುವಂತೆ ಮಾಡಬೇಕು. ಕುಟುಂಬದಲ್ಲಿ ಜಗಳ ಕಲಹಗಳಿಗೆ ಆಸ್ಪದ ಕೊಡಬಾರದು. ಪಾಪಾಚರಣೆಯನ್ನು ಬಿಟ್ಟು, ವೇದಾನುಕೂಲವಾದ ಮಾರ್ಗದಲ್ಲಿ ಸಾಗುವವರಿಗೆ ದಿಕ್ಕುಗಳು, ಸಮುದ್ರಗಳು, ನದಿಗಳು, ಪ್ರಾಣಿಗಳು ಮುಂತಾದ ಎಲ್ಲವೂ ಮಂಗಳಕಾರಿಗಳಾಗುತ್ತವೆ. ''ನೂರು ವರ್ಷಗಳು ಬಾಳುತ್ತ ಜಗತ್ತಿನ ಕಲ್ಯಾಣವನ್ನು ಸಾಧಿಸುವುದರಲ್ಲಿಯೇ ಚಿತ್ತವಿಡುತ್ತೇನೆ'' ಎಂಬ ಗುರಿಯಿರಬೇಕು. ಅನ್ನವಸ್ತ್ರಾದಿಗಳನ್ನೂ ಉತ್ತಮೋತ್ತಮ ಪದಾರ್ಥಗಳನ್ನೂ ಅಗತ್ಯವಿದ್ದವರಿಗೆ ದಾನಮಾಡುವವರು ಗೋವುಗಳಂತೆ ಸದಾಸರ್ವದಾ ಶುದ್ಧರಾಗಿರುತ್ತಾರೆ, ಅವರು ಭಗವಂತನ ಹೆಚ್ಚಿನ ಕೃಪಾಶೀರ್ವಾದಗಳಿಗೆ ಪಾತ್ರರಾಗುತ್ತಾರೆ. ಮಹಾತ್ಮರಿಗೂ ಅತಿಥಿಗಳಿಗೂ ಅನ್ನವಿಕ್ಕಿದ ಬಳಿಕವೇ ತಾವು ಊಟಮಾಡುವವರು ಭಗವಂತನ ರಕ್ಷಣೆಗೆ ಪಾತ್ರರಾಗುತ್ತಾರೆ. ಹಾಗೆ ಮಾಡದೆ ತಾವು ಮಾತ್ರವೇ ಉಂಡುತೇಗುವವರನ್ನು ಅನ್ನವೇ ತಿಂದುಹಾಕುತ್ತದೆ.

**ಉದ್ಯಮಶೀಲತೆ:** ಹಸುವು ಸಾಧಾರಣವಾದ ಹುಲ್ಲು ತಿಂದು ಅಮೂಲ್ಯವಾದ ಹಾಲು ಕೊಡುವಂತೆ, ಗೃಹಸ್ಥನು ಕೂಡ ದುಂದುಗಾರನಾಗದೆ ಸರಳಜೀವನವನ್ನು ನಡೆಸುತ್ತ ಜಗತ್ತಿನ ಉಪಕಾರದಲ್ಲಿ ನಿರತನಾಗಬೇಕು. ''ಲೋಕಕ್ಕೆ ಏನಾದರೂ ಉಪಕಾರವಾಗುವ ಶುಭಕಾರ್ಯಗಳನ್ನು ನಮ್ಮಿಂದ ಮಾಡಿಸು'' ಎಂದು ಭಗವಂತನನ್ನು ಬೇಡಬೇಕು. ''ನನ್ನ ಕಿವಿಗಳು ಮಂಗಳಕರವಾದುದನ್ನೇ ಆಲಿಸುವಂತಾಗಲಿ, ನನ್ನ ಕಣ್ಣುಗಳು ಮಂಗಳ ದೃಶ್ಯಗಳನ್ನೇ ಕಾಣುವಂತಾಗಲಿ, ನನ್ನ ವಾಣಿಯು ಪವಿತ್ರವಾದುದನ್ನೇ ಉಚ್ಚರಿಸುವಂತಾಗಲಿ, ನನ್ನ ಶರೀರವು ಸದೃಢವಾಗಿದ್ದು, ಅದರ ಮೂಲಕ ಲೋಕಸೇವೆ ಮಾಡುವಂತಾಗಲಿ'' ಎಂದೇ ಗೃಹಸ್ಥನು ಬಯಸಬೇಕು. ಗೃಹಸ್ಥರು ನಿದ್ರಾಳುಗಳೂ ಆಲಸಿಗಳೂ ಉದ್ಯಮಹೀನರೂ ಆಗದೆ, ಜಾಗೃತರೂ ಉದ್ಯೋಗಿಗಳೂ ಪ್ರಯತ್ನಶೀಲರೂ ಆಗಿರಬೇಕು. ಪರಮಾತ್ಮನು ಕೊಟ್ಟಿರುವಷ್ಟು ಪದಾರ್ಥಗಳಿಂದ ಗೃಹಸ್ಥರು ತೃಪ್ತಿಪಡಬೇಕೇ ಹೊರತು, ಅನ್ಯರ ಸಂಪತ್ತಿಗಾಗಿ ಬಾಯಿಬಿಡಬಾರದು.

**ಭಗವಂತನಲ್ಲಿ ಶರಣಾಗತಿ:** ''ಚಕ್ರದ ಅರೆ ಕಾಲುಗಳಿಗೆ ಗುಂಭವು ಆಧಾರವಾಗಿರುವಂತೆ, ಈ ಜಗತ್ತಿಗೆ ಪರಮಾತ್ಮನೇ ಆಧಾರನಾಗಿದ್ದಾನೆ. ಪ್ರಾತಃಕಾಲದಲ್ಲಿ ಆ ಪ್ರಭುವಿಗೆ ನಮಸ್ಕಾರ, ಸಾಯಂಕಾಲದಲ್ಲಿ ನಮಸ್ಕಾರ, ರಾತ್ರಿಯಲ್ಲಿ ನಮಸ್ಕಾರ. ನನ್ನ ದುಃಖಗಳನ್ನು ನಾಶಮಾಡಿ ನನಗೆ ಸುಖವನ್ನುಂಟುಮಾಡುವ ಆ ಭಗವಂತನಿಗೆ ನಾನು ಎರಡೂ ಕೈಗಳನ್ನು ಮುಗಿದು ನಮಸ್ಕರಿಸುತ್ತೇನೆ'' ಎಂದು ಭಗವಂತನಿಗೆ ಶರಣಾಗಬೇಕು. ಭಗವಂತನು ನಮಗೆ ಎಲೆಗಳಂತೆ ಬೇಗನೆ ಉದುರಿಹೋಗುವ ಶರೀರಗಳನ್ನು ಕೊಟ್ಟು, ನಾಳಿನವರೆಗೆ ಇರುತ್ತದೋ ಇಲ್ಲವೋ ಎನ್ನುವಷ್ಟು ಅನಿತ್ಯವಾದ ಸಂಸಾರದಲ್ಲಿ ನಮ್ಮನ್ನೆಲ್ಲ ಇರಿಸಿದ್ದಾನೆ. ಆದ್ದರಿಂದ ಸರ್ವತ್ರ ಪರಿಪೂರ್ಣನೂ ಶಾಶ್ವತನೂ ಆದ ಪರಮಾತ್ಮನನ್ನು



ಸ್ಮರಿಸುತ್ತ, ಗೃಹಸ್ಥ ಜೀವನದಲ್ಲಿ ಕಲ್ಯಾಣಭಾಗಿಗಳಾಗಬೇಕು. ಶರೀರವನ್ನು ಬಿಡುವ ಹೊತ್ತಿನಲ್ಲಿ ಓಂಕಾರಸ್ವರೂಪನಾದ ಪರಮೇಶ್ವರನನ್ನೇ ಸ್ಮರಿಸುತ್ತ, ಮರಣಭಯವನ್ನು ನೀಗಿಕೊಂಡು, ಅವನಲ್ಲಿಯೇ ಒಂದಾಗಿ ಬಿಡಬೇಕು. ಹೀಗೆ ವೇದಗಳು ಗೃಹಸ್ಥಧರ್ಮಕ್ಕೆ ನೀಡಿರುವ ಉಪದೇಶಗಳಲ್ಲಿ ನಮ್ಮ ಸನಾತನ ಪರಂಪರೆಯ ಗೃಹಸ್ಥ ಜೀವನದ ಆದರ್ಶಗಳೇ ತುಂಬಿತುಳುಕುತ್ತಿವೆ.

### ಪುರುಷನ ಹೊಣೆಗಾರಿಕೆಯೇ ಗುರುತರವಾದುದು

'ವಿಷ್ಣುಪುರಾಣ'ವು ಗೃಹಸ್ಥಧರ್ಮದಲ್ಲಿ ಪುರುಷನ ಮೇಲೆಯೇ ಹೆಚ್ಚಿನ ಹೊಣೆಗಾರಿಕೆಯನ್ನು ಹೊರಿಸಿದೆ. ಪ್ರಾಜ್ಞನಾದ ಗೃಹಸ್ಥನು ಸೂರ್ಯೋದಯಕ್ಕೆ ೪೮ ನಿಮಿಷಗಳ ಹಿಂದಿನ ಮುಹೂರ್ತವಾದ ಬ್ರಾಹ್ಮೀಮುಹೂರ್ತದಲ್ಲಿ ಏಳಬೇಕು. ಸ್ನಾನ ಮಾಡಿ ನಿತ್ಯಕರ್ಮಗಳನ್ನು ಪೂರೈಸಬೇಕು. ಜಲತರ್ಪಣವನ್ನು ಕೊಡುವಾಗ ''ನಾನಾ ಬಗೆಯ ನರಕಗಳಲ್ಲಿ ಬೇಯುತ್ತಿರುವವರಾಗಲಿ, ಹಸಿವು ಬಾಯಾರಿಕೆಗಳಿಂದ ಎಲ್ಲೆಲ್ಲಿಯೋ ಬಳಲುತ್ತಿರುವ ಜೀವಗಳಾಗಲಿ — ನಾನು ಕೊಡುವ ಈ ತರ್ಪಣದಿಂದ ತೃಪ್ತಿ ಹೊಂದಲಿ'' ಎಂದು ಹೇಳಬೇಕು. ಮನೆಗೆ ಬಂದ ಅತಿಥಿಯನ್ನು ಸತ್ಕರಿಸಬೇಕು. ಒಂದು ವೇಳೆ ಅತಿಥಿಯು ಸತ್ಕಾರವಿಲ್ಲದೆ ನಿರಾಶನಾಗಿ ತೆರಳಿದರೆ, ಅವರು ತನ್ನ ಪಾಪವನ್ನು ಆ ಗೃಹಸ್ಥನಿಗೆ ಕೊಟ್ಟು, ಆ ಗೃಹಸ್ಥನ ಪುಣ್ಯವನ್ನು ತಾನು ಅಪಹರಿಸಿಕೊಂಡು ಹೊರಟುಹೋಗುತ್ತಾನೆ. ಒಂದು ವೇಳೆ ಅತಿಥಿಯು ರಾತ್ರಿಯಲ್ಲಿ ಬಂದರೆ, ಅವನನ್ನು ಭೋಜನದಿಂದ ಸತ್ಕರಿಸಿ, ಮಲಗಲು ಸೂಕ್ತ ವ್ಯವಸ್ಥೆ ಮಾಡಿಕೊಡಬೇಕು.

**ಸಜ್ಜನರ ಸಹವಾಸ:** ಗೃಹಸ್ಥನು ಅಪ್ರಿಯವಾಕ್ಯಗಳನ್ನಾಡಬಾರದು. ಅನ್ಯರ ವಸ್ತುಗಳನ್ನು ಅಪಹರಿಸಬಾರದು. ಇನ್ನೊಬ್ಬರ ದೋಷಗಳನ್ನು ಎತ್ತಿ ಆಡಬಾರದು. ಸುಳ್ಳುಸಾಕ್ಷಿ ಹೇಳಬಾರದು. ದುಷ್ಟರಿಂದಲೂ ದುಂದುಗಾರರಿಂದಲೂ ಕನಿಷ್ಠರಿಂದಲೂ ದೂರವಿರಬೇಕು. ಅರ್ಧಕ್ಷಣವೇ ಸಿಕ್ಕಿದರೂ ಸಾಕು, ಸಜ್ಜನರ ಸಂಗವನ್ನು ಮಾಡಬೇಕು. ಕರವಸ್ತ್ರಾದಿಗಳಿಂದ ಬಾಯಿಮುಚ್ಚಿಕೊಳ್ಳದೆ ಆಕಳಿಸಬಾರದು. ಶಬ್ದವಾಗುವಂತೆ ಅಧೋವಾಯುಗಳನ್ನು ಬಿಡಬಾರದು. ಗಹಗಹಿಸಿ ನಗಬಾರದು. ಅಕಾರಣ ವೈರವನ್ನೂ, ಜಗಳವನ್ನೂ ವರ್ಜಿಸಬೇಕು. ಪೂಜ್ಯರೆದುರು ಕಾಲು ನೀಡಿ

ಕುಳಿತುಕೊಳ್ಳಬಾರದು. ನಿಂತುಕೊಂಡಾಗಲಿ, ದಾರಿ ಮಗ್ಗುಲಿನಲ್ಲಾಗಲಿ ಮೂತ್ರ ವಿಸರ್ಜನೆ ಸಲ್ಲದು. ನಾಲ್ಕು ರಸ್ತೆಗಳು ಸೇರುವ ಚೌಕವನ್ನು ವಂದಿಸಬೇಕು. ದೀನರಿಗೆ ಉಪಕಾರ ಮಾಡಬೇಕು. ಅನಾರೋಗ್ಯಕ್ಕೆ ತುತ್ತಾಗಿದ್ದರೆ ಹೊರತಾಗಿ, ಸೂರ್ಯೋದಯ-ಸೂರ್ಯಾಸ್ತಗಳಲ್ಲಿ ನಿದ್ರಿಸುವ ಪುರುಷನು ಪಾಪಕ್ಕೆ ಗುರಿಯಾಗುತ್ತಾನೆ.

**ಲೋಕಹಿತ ಕಾರ್ಯಗಳು:** ಗೃಹಸ್ಥನು ಕ್ಷಮಾಶೀಲನಾಗಿರಬೇಕು. ಕೋಪಗೊಂಡವರನ್ನು ಸಂತೈಸಬೇಕು. ಭಯಕ್ಕೆ ತುತ್ತಾದವರಿಗೆ ಧೈರ್ಯ ಹೇಳಬೇಕು. ಪತ್ನಿಯು ಅಪ್ರಸನ್ನಳಾಗಿದ್ದರೆ, ಕಾಯಿಲೆಗೆ ಗುರಿಯಾಗಿದ್ದರೆ, ರಜಸ್ವಲೆಯಾಗಿದ್ದರೆ, ಗರ್ಭಿಣಿಯಾಗಿದ್ದರೆ, ಅವಳ ಸಂಗವನ್ನು ಮಾಡಬಾರದು. ಸ್ತ್ರೀಯರನ್ನು ಅವಮಾನಪಡಿಸುವುದಾಗಲಿ, ಮಾತ್ಸರ್ಯದಿಂದ ನೋಡುವುದಾಗಲಿ, ಧಿಕ್ಕರಿಸಿ ನಿಂದಿಸುವುದಾಗಲಿ ಮಾಡಬಾರದು. ಪರಸ್ತ್ರೀಯರನ್ನು ಮನದಲ್ಲಿ ಕೂಡ ಕಾಮಿಸಬಾರದು. ಒಂದು ವೇಳೆ ಕಾಮಿಸಿದರೆ, ಅಂಥವನು ಮೃತನಾದಮೇಲೆ ನರಕದ ದುಃಖಗಳನ್ನು ಅನುಭವಿಸಿ, ತರುವಾಯ ಮೂಳೆಯಿಲ್ಲದ ಕ್ರಿಮಿಜನ್ಮಕ್ಕೆ ಬೀಳುತ್ತಾನೆ. ಮನಸ್ಸು, ಮಾತು ಮತ್ತು ಕ್ರಿಯೆಗಳಿಂದ ಲೋಕಹಿತಕಾರಿಯಾದ ಕಾರ್ಯಗಳನ್ನು ಮಾಡುವ ಗೃಹಸ್ಥರ ಪ್ರಭಾವದಿಂದಲೇ ಈ ಲೋಕವು ನಿಂತಿದೆ. ಹೀಗೆ 'ವಿಷ್ಣುಪುರಾಣ'ವು ಮನೆಯ ಯಜಮಾನನ ನಡೆನುಡಿಗಳ ಮೇಲೆ ಹೆಚ್ಚಿನ ಒತ್ತು ನೀಡಿದೆ.

## ಧರ್ಮಪತ್ನಿಯ ಗುಣಸ್ವಭಾವಗಳು

ಶ್ರೀರಾಮಸೀತಾಲಕ್ಷ್ಮಣರು ಅರಣ್ಯವಾಸಕ್ಕೆ ಹೋಗುವ ಹಾದಿಯಲ್ಲಿ, ಅತ್ರಿ-ಅನಸೂಯೆಯರ ಆಶ್ರಮವನ್ನು ಪ್ರವೇಶಿಸಿ, ಆ ಪುಣ್ಯದಂಪತಿಗಳ ಆತಿಥ್ಯವನ್ನು ಸ್ವೀಕರಿಸಿದರು. ಆ ಹೊತ್ತಿನಲ್ಲಿ ಪತಿವ್ರತಾ ಶಿರೋಮಣಿಯಾದ ಅನಸೂಯೆಯು ಸೀತಾದೇವಿಗೆ ಮಾಡಿದ ಉಪದೇಶದ ಮಾತುಗಳನ್ನು ಗಮನಿಸಿದರೆ, ನಮ್ಮ ಸನಾತನಪರಂಪರೆಯಲ್ಲಿ ಗೃಹಿಣಿಯ ಆದರ್ಶಗಳೇನು ಎಂಬುದು ಸ್ಫುಟಗೊಳ್ಳುತ್ತದೆ. ''ಗೃಹಿಣಿಯರು ಧರ್ಮಮಾರ್ಗದಲ್ಲಿ ನಡೆದರೆ ಅವರು ಮಹಾಭಾಗ್ಯಶಾಲಿನಿಯಾಗುತ್ತಾರೆ. ಪತಿಯು ಪಟ್ಟಣದಲ್ಲಿರಬಹುದು ಅಥವಾ ಅರಣ್ಯದಲ್ಲಿರಬಹುದು; ಅವನು ಒಳ್ಳೆಯವನಾಗಿರಬಹುದು ಅಥವಾ ಕೆಟ್ಟವನಾಗಿರಬಹುದು; ಅವನು ದುಷ್ಟನಾಗಿರಬಹುದು ಅಥವಾ ಸ್ವೇಚ್ಛಾಚಾರಿಯಾಗಿರಬಹುದು; ಅವನು ಸಿರಿವಂತನಾಗಿರಬಹುದು ಅಥವಾ ಬಡವನಾಗಿರಬಹುದು — ಅವನು ಯಾವ ಸ್ಥಿತಿಯಲ್ಲಿದ್ದರೂ ಆರ್ಯಸ್ವಭಾವದ ಮಡದಿಯರು, ತಮ್ಮ ಪತಿಯನ್ನೇ ಪರದೈವವೆಂದು ಭಾವಿಸಿ ಪ್ರೀತಿಸುತ್ತಾರೆ. ನೀನು ಕೂಡ ಪತಿವ್ರತೆಯರ ನಿಯಮಗಳನ್ನು ಪಾಲಿಸುತ್ತ, ಶ್ರೀರಾಮನನ್ನು ಅನುವರ್ತಿಸುತ್ತ ಬಾಳಾಟ ಮಾಡು. ಅದರಿಂದ ನೀನು ಕೀರ್ತಿಯನ್ನೂ ಪುಣ್ಯವನ್ನೂ ಸ್ವರ್ಗಲೋಕವಿಹಾರವನ್ನೂ ಪಡೆದುಕೊಳ್ಳುತ್ತೀಯೆ'' ಎಂದು ಅನಸೂಯೆಯು ಸೀತೆಗೆ ಆದರದಿಂದ ಉಪದೇಶಿಸಿದಳು.

ಆ ಉಪದೇಶವಾಣಿಯನ್ನು ಸ್ವೀಕರಿಸುತ್ತ, ಆಗ ಸೀತಾದೇವಿ ಆಡಿದ ಮಾತುಗಳಲ್ಲಿ ಕೂಡ, ಪತಿವ್ರತಾಧರ್ಮವು ನಿಹಿತವಾಗಿದೆ. ''ಸ್ತ್ರೀಯರಿಗೆ ಪತಿಶುಶ್ರೂಷೆಗಿಂತ ಮಿಗಿಲಾದ ತಪಸ್ಸು ಬೇರೊಂದಿಲ್ಲ. ಸಾವಿತ್ರೀದೇವಿಯು ಪತಿಸೇವೆಯನ್ನಾಶ್ರಯಿಸಿ ಸ್ವರ್ಗದಲ್ಲಿ ಮಾನ್ಯತೆಯನ್ನು ಪಡೆದಳು. ಅಂತೆಯೇ ರೋಹಿಣಿಯು ತನ್ನ ಪತಿಯಾದ ಚಂದ್ರನ ಸೇವೆಯಲ್ಲಿಯೇ ಮಗ್ನಳಾಗಿ, ಅವನನ್ನು ಒಂದು ಕ್ಷಣವಾದರೂ ಅಗಲದೆ, ಆಗಸದಲ್ಲಿ ನಕ್ಷತ್ರವಾಗಿ ತೊಳಗುತ್ತಿದ್ದಾಳೆ'' ಎಂದು ಆ ಮಾತುಗಳನ್ನು ಅನುಮೋದಿಸಿದಳು.

**ಪರಸ್ತ್ರೀಯರಿಗೆ ಮಾತೃಸ್ಥಾನ:** ಗೃಹಸ್ಥಜೀವನದಲ್ಲಿ ಪತ್ನಿಯು ಧರ್ಮಜ್ಞಳಾಗಿದ್ದರಷ್ಟೇ ಸಾಲದು, ಪತಿಯು ಕೂಡ ಅವಳಿಗೆ ಸರಿದೊರೆಯಾಗಿರಬೇಕು ಎಂಬ ಆದರ್ಶವೂ ಆ ಹೊತ್ತಿನಲ್ಲಿ ಸೀತಾದೇವಿಯು ಆಡಿದ ಮಾತುಗಳಲ್ಲಿ ವ್ಯಕ್ತವಾಗಿದೆ. ''ಪತಿಯಾದವನು ಸದ್ಗುಣಸಂಪನ್ನನಾಗಿರಬೇಕು, ದಯಾವಂತನಾಗಿರಬೇಕು. ಜಿತೇಂದ್ರಿಯನಾಗಿರಬೇಕು. ಅವನು ತನ್ನ ಮಡದಿಯಲ್ಲಿ ಸ್ಥಿರವಾದ ಪ್ರೀತಿಯನ್ನಿಟ್ಟಿರಬೇಕು. ಅವನು ತನ್ನ ತಂದೆತಾಯಿಗಳ ವಿಷಯದಲ್ಲಿ ವಿನಯದಿಂದ ನಡೆದುಕೊಳ್ಳಬೇಕು. ಪರಸ್ತ್ರೀಯರನ್ನು ತಾಯಿಯೆಂದು ಭಾವಿಸಿ ಗೌರವಿಸಬೇಕು'' ಎಂದು ಮುಂತಾಗಿ ಸೀತಾದೇವಿಯು ಸೂಚಿಸಿದಳು.

**ಪತಿತರನ್ನು ಪಾವನಗೊಳಿಸುವ ಸ್ತ್ರೀಯರು:** ತನ್ನ ಆಚಾರವಿಚಾರಗಳನ್ನು ಪರಿಶುದ್ಧವಾಗಿಟ್ಟುಕೊಳ್ಳಬೇಕೆಂದು ಬಯಸುವ ನಾರಿಯರು, ಈ ಹಿಂದೆ ಸಾಧ್ವಿಯರು ನಡೆದು ಹೋದ ಹಾದಿಯನ್ನೇ ಅನುಸರಿಸಬೇಕು. ಪರನಿಂದೆ ಮಾಡಬಾರದು, ಸುಳ್ಳಾಡಬಾರದು, ಧೈರ್ಯಶಾಲಿನಿಯಾಗಿರಬೇಕು, ಶುಭವ್ರತಗಳನ್ನು ಅನುಷ್ಠಾನಮಾಡಬೇಕು, ಸವಿನುಡಿಗಳನ್ನಾಡಬೇಕು. ಈ ಪರಿಯ ಸ್ತ್ರೀಯರೇ ಒಂದು ವೇಳೆ ತಮ್ಮ ಪುರುಷರು ಗುಣಹೀನರಾಗಿದ್ದರೂ, ಅವರನ್ನು ಮೇಲೆತ್ತಿ ಉದ್ಧರಿಸಿ ತಾವೂ ಉದ್ಧಾರವಾಗಿಬಿಡುತ್ತಾರೆ. ಕಾಮಪ್ರೇರಣೆಯಿಂದಾಗಲಿ, ಕುತೂಹಲದಿಂದಾಗಲಿ ಪರಪುರುಷರ ಸಂಗಕ್ಕೆ ತುತ್ತಾಗಬಾರದು. ಹಾಗೆ ತುತ್ತಾದವರು, ನರಕಾದಿ ಲೋಕಗಳಲ್ಲಿ ಬೇಯುತ್ತ, ಹೀನಯೋನಿಗಳಲ್ಲಿ ಹುಟ್ಟಿ ಸಾಯುತ್ತ, ತುದಿಮೊದಲಿಲ್ಲದ ಸಂಕಟ ಪರಂಪರೆಗೆ ಗುರಿಯಾಗುತ್ತಾರೆ. ಪರಪುರುಷರನ್ನು ಸಾಧ್ವಿಯರು ತಂದೆಯೆಂದೋ ಸೋದರನೆಂದೋ ಪುತ್ರನೆಂದೋ ಭಾವಿಸಿ ಬಾಳಬೇಕು. ಈ ಪರಿಯಲ್ಲಿ ಗೃಹಿಣಿಯ ಆದರ್ಶಗಳನ್ನು ಸಾಕ್ಷಾತ್ ಪಾರ್ವತಿದೇವಿಯೇ ಅರುಂಧತಿಗೆ ಉಪದೇಶಿಸಿದಳೆಂದು ಮಹಾಭಾರತದ ಖಿಲಭಾಗವೆನಿಸಿದ 'ಹರಿವಂಶ'ದ ವಿಷ್ಣುಪರ್ವದಲ್ಲಿ ನಿರೂಪಿತವಾಗಿದೆ. ''ನಾನು ನನ್ನ ಪತಿ ಮಹಾದೇವನ ಅನುಗ್ರಹದಿಂದಲೇ ಸರ್ವಜ್ಞಳಾಗಿದ್ದೇನೆ. ಅವನ ಕೃಪೆಯಿಂದಲೇ ಎಲ್ಲ ಪುಣ್ಯವ್ರತಗಳೂ ನನಗೆ ಸಿದ್ಧಿಸಿವೆ'' ಎಂದು ಪಾರ್ವತೀದೇವಿಯು ಅಲ್ಲಿ ಹೇಳಿರುವ ಮಾತು ಮನನೀಯವಾಗಿದೆ.

**ಭಗವಂತನಲ್ಲಿ ಬೇಡಿಕೆ:** ಗೃಹಿಣಿಯರು ವ್ರತೋಪವಾಸಗಳನ್ನು ತಮ್ಮ ಯಜಮಾನರ ಅನುಜ್ಞೆಯನ್ನು ಪಡೆದೇ ಆಚರಿಸ

ಬೇಕು. ಹಾಗೆ ಆಚರಿಸುವಾಗಲೆಲ್ಲ ಭಗವಂತನನ್ನು ಕುರಿತು ''ನಾನು ನನ್ನ ಪತಿಗೆ ಕಲ್ಯಾಣಕಾರಿಣಿಯಾಗಿರಬೇಕು, ಸಂತಾನ ವತಿಯಾಗಿರಬೇಕು, ಪತಿಗೆ ದಾಸಿಯಾಗಿರಬೇಕು, ಬಡತನವು ನಮ್ಮನ್ನು ಕಾಡದಂತಿರಬೇಕು. ಬೇಡಿದವರಿಗೆ ನಾನು ಮುಕ್ತಹಸ್ತ ಳಾಗಿ ದಾನಕೊಡುವಂತಾಗಬೇಕು, ಇತರರ ಅವಗುಣಗಳನ್ನು ಎಣಿಸದೆ ಸದ್ಬುದ್ಧಿಯುಂಟಾಗಬೇಕು'' ಎಂಬುದಾಗಿ ಬೇಡಿಕೊಳ್ಳ ಬೇಕೆಂಬ ಆದರ್ಶವನ್ನು 'ಹರಿವಂಶ'ವು ಸ್ಥಾಪಿಸಿದೆ. ''ಪತಿಯು ಯಾವಾಗಲೂ ಸುಮುಖನಾಗಿದ್ದು, ಸತಿಯನ್ನು ಅನುರಾಗ ದಿಂದ ಎದುರುಗೊಳ್ಳಬೇಕು. ಅವನ ಗತಿ ಮತ್ತು ಮತಿಗಳು ಯಾವಾಗಲೂ ಅವಳ ಕಡೆಗೇ ವಾಲಿಕೊಂಡಿರಬೇಕು'' ಎಂಬು ದಾಗಿ ಪತಿಯ ವರ್ತನೆಯ ಮೇಲೂ ಅಲ್ಲಿಯೇ ಬೆಳಕು ಬೀರ ಲಾಗಿದೆ. ಪತ್ನಿಯಿಂದ ಪತಿಯೂ, ಪತಿಯಿಂದ ಪತ್ನಿಯೂ, ಯಾವ ಕುಲದಲ್ಲಿ ಪರಸ್ಪರ ಸಂತೋಷಗೊಳ್ಳುತ್ತಾರೆಯೋ, ಅಲ್ಲಿ ನಿತ್ಯವಾಗಿಯೂ ಕಲ್ಯಾಣವುಂಟಾಗುತ್ತದೆ, ಮಂಗಳಪರಂಪರೆ ಗಳು ನಡೆಯುತ್ತವೆ.

**ಲಕ್ಷ್ಮೀದೇವಿಯ ನಿವಾಸ:** ''ಕೂದಲನ್ನು ಕೆದರಿಕೊಳ್ಳದೆ ಚೆನ್ನಾಗಿ ಬಾಚಿಕೊಂಡು ಅಲಂಕಾರ ಮಾಡಿಕೊಂಡಿರಬೇಕು. ದೇವತೆಗಳನ್ನು ಪೂಜಿಸುತ್ತ, ಅವರಿಗೆ ನೈವೇದ್ಯಗಳನ್ನು ಸಮ ರ್ಪಿಸಬೇಕು. ಪುತ್ರವತಿಯರಾಗಿರಬೇಕು. ಮನೆಯನ್ನು ಕೊಳಕಿ ಲ್ಲದೆ ಅಂದವಾಗಿ ಕಾಪಾಡಿಕೊಂಡಿರಬೇಕು. ಜಿತೇಂದ್ರಿಯರೂ ಕಾಠಿಣ್ಯವಿಲ್ಲದವರೂ ಆಗಿರಬೇಕು. ಅಚಂಚಲ ಸ್ವಭಾವದವರೂ ಧರ್ಮದಲ್ಲಿ ಹೆಚ್ಚಿನ ಅಪೇಕ್ಷೆಯುಳ್ಳವರೂ ಆಗಿರಬೇಕು. ಅಂತಹ ಗೃಹಿಣಿಯರಲ್ಲಿ ನಾನು ನೆಲೆಸಿರುತ್ತೇನೆ'' ಎಂದು ಲಕ್ಷ್ಮೀದೇವಿ ಯು ಹೇಳಿರುವ ಸಾಧ್ವಿಯರ ಆದರ್ಶದ ತತ್ತ್ವವು, ಶ್ರೀರಂಗ ಮಹಾಗುರುಗಳು ಉದ್ಧರಿಸಿರುವ ಶ್ಲೋಕವೊಂದರಲ್ಲಿ 'ಅಮರ ವಾಣಿ'ಯಲ್ಲಿದೆ.

**ಸ್ತ್ರೀಯರು ಸ್ವಾತಂತ್ರ್ಯಕ್ಕೆ ಅರ್ಹರಲ್ಲ:** ತಂದೆಯು ತನ್ನ ಹೆಣ್ಣು ಮಕ್ಕಳನ್ನು ಅವರ ಬಾಲ್ಯದಲ್ಲಿ ಕಾಪಾಡಿ ಮೇಲೆ ತರುತ್ತಾನೆ. ಅವರು ಯೌವನಕ್ಕೆ ಬಂದಾಗ, ಯೋಗ್ಯನಾದ ವರನನ್ನು ಹುಡುಕಿ ತಂದು ಧಾರೆಯೆರೆದು ಕೊಡುತ್ತಾನೆ. ಆಗ ಅವಳನ್ನು ರಕ್ಷಿಸಿಕೊಳ್ಳುವ ಹೊಣೆಗಾರಿಕೆ ಆ ಪುರುಷನಿಗೆ ಸೇರುತ್ತದೆ. ಮುಂದಕ್ಕೆ ಗೃಹಸ್ಥಧರ್ಮದಲ್ಲಿ ಆ ಹೆಣ್ಣುಮಗಳು ಪುತ್ರರನ್ನೂ ಪಡೆದು, ಅವರನ್ನು ಅಕ್ಕರೆಯಿಂದ ಬೆಳಸಿ, ತಾನು ವೃದ್ಧಾಪ್ಯದತ್ತ ಸಾಗುತ್ತಾಳೆ. ಆಗ ಆ ಗಂಡುಮಕ್ಕಳೇ ಅವಳ ಯೋಗಕ್ಷೇಮವನ್ನೆಲ್ಲಾ ನೋಡಿಕೊಳ್ಳುತ್ತಾರೆ. ಪರಿಸ್ಥಿತಿಯು ಹೀಗಿರುವಾಗ ಸ್ತ್ರೀಯರು ಸ್ವಾತಂತ್ರ್ಯಕ್ಕೆ ಅರ್ಹರಲ್ಲ ಎಂದು ಮನುವು ತನ್ನ ಧರ್ಮಶಾಸ್ತ್ರದಲ್ಲಿ ಬರೆದಿದ್ದಾನೆ. ಸ್ತ್ರೀಯರು ಸ್ವಾತಂತ್ರ್ಯಕ್ಕೆ ಅರ್ಹರಲ್ಲ ಎಂಬ ಮಾತನ್ನು ನಕಾರಾತ್ಮಕವಾಗಿ ಪರಿಭಾವಿಸಬಾರದು. ಮಾತೆಯರ ಜೀವಿತಾವಧಿಯಲ್ಲಿ ಯಾವಾಗಲೂ ಅವರ ರಕ್ಷಣೆಗೆ ಕೊರತೆ ಯುಂಟಾಗಬಾರದು. ಬಾಲ್ಯದಲ್ಲಿ ತಂದೆಯೂ, ಯೌವನದಲ್ಲಿ ಗಂಡನೂ, ಮುಪ್ಪಿನಲ್ಲಿ ಮಕ್ಕಳೂ ಅಂಗರಕ್ಷಕರಾಗಿ ಆಕೆಯ ಯೋಗಕ್ಷೇಮದ ಹೊಣೆಯನ್ನು ಹೊತ್ತುಕೊಳ್ಳಬೇಕು. ''ಅವಳು ಏನಾದರೂ ಮಾಡಿಕೊಳ್ಳಲಿ, ಹೇಗಾದರೂ ಇದ್ದುಕೊಳ್ಳಲಿ'' ಎಂದು ಅಸಡ್ಡೆ ಮಾಡುವುದು ಸಲ್ಲದು ಎಂಬ ಆದರ್ಶವನ್ನು ಇಲ್ಲಿ ಸ್ವೀಕರಿಸಬೇಕು. ಮನುವೇ ಮುಂದುವರಿದು, ''ಎಲ್ಲಿ ಸ್ತ್ರೀಯರಿಗೆ ಹೆಚ್ಚಿನ ಘನತೆಗೌರವಗಳು ಪ್ರಾಪ್ತವಾಗುತ್ತವೆಯೋ ಅಲ್ಲಿ ದೇವತೆಗಳೂ ನೆಲೆಗೊಂಡು ಆನಂದಪಡುತ್ತಾರೆ. ಅವರ ಸಮ್ಮುಖದಲ್ಲಿ ನಡೆಯುವ ಎಲ್ಲ ಕೆಲಸಕಾರ್ಯಗಳೂ ಯಶಸ್ವಿ ಯಾಗುತ್ತವೆ. ಎಲ್ಲಿ ಅವರಿಗೆ ಪೂಜ್ಯವಾದ ಸ್ಥಾನವು ಲಭಿಸುವು ದಿಲ್ಲವೋ, ಅಲ್ಲಿ ಮಾಡಲಾಗುವ ಎಲ್ಲ ಕೆಲಸಗಳೂ ಯಾವುದೇ ಫಲಕೊಡದೆ ನಿಷ್ಪ್ರಯೋಜಕವಾಗುತ್ತವೆ'' ಎಂಬುದಾಗಿಯೂ ಹೇಳಿದ್ದಾನೆ. ಹೀಗಾಗಿ ಮನುವು ಮಾತೆಯರನ್ನು ಅತ್ಯಂತ ಉನ್ನತವಾದ ಸ್ಥಾನದಲ್ಲಿರಿಸಿದ್ದಾನೆಂಬುದು ಸ್ಪಷ್ಟವಾಗುತ್ತದೆ.

**ವಿವಾಹಕ್ಕೆ ಯೋಗ್ಯತೆ:** ವಿದ್ಯೆ, ವಿವಾಹವಾಗುವ ಇಚ್ಛೆ, ಅದಕ್ಕೆ ತಕ್ಕ ವಯೋಮಾನ, ಶಕ್ತಿ, ಆರೋಗ್ಯ, ಹಣಕಾಸಿನ ಅನು ಕೂಲ, ಜನಾನುರಾಗ — ಇವಿಷ್ಟೂ ಇದ್ದರೆ ಮಾತ್ರವೇ ಪುರು ಷನು ವಿವಾಹಕ್ಕೆ ಮುಂದಾಗಬೇಕು ಎಂದು 'ಬೃಹತ್ ಪರಾಶರ ಸ್ಮೃತಿ'ಯಲ್ಲಿ ಹೇಳಿದೆ. ಸೂಕ್ತವಾದ ಸಿದ್ಧತೆಗಳಿಲ್ಲದೆ ಮದುವೆ ಯಾದರೆ ಕಣ್ಣುಕಣ್ಣು ಬಿಡುವಂತಾಗುತ್ತದೆ, ಸ್ತ್ರೀಯಳನ್ನೂ ಕಷ್ಟಕ್ಕೆ ತಳ್ಳಿದಂತಾಗುತ್ತದೆ ಎಂಬುದೇ ಸ್ಮೃತಿಕಾರರ ಅಭಿಪ್ರಾಯವಾಗಿದೆ.

## ಸುಭಾಷಿತಕಾರರ ದೃಷ್ಟಿಯಲ್ಲಿ ಗೃಹಸ್ಥಜೀವನದ ಆದರ್ಶ

**ಗೃಹಸ್ಥನಿಗೆ ನೂರೆಂಟು ನಿಯಮಗಳು:** ಬಹಳ ದೂರದಲ್ಲಿರು ವವನಿಗಾಗಲಿ ಬಹಳ ಹತ್ತಿರದಲ್ಲಿರುವವನಿಗಾಗಲಿ; ಬಹಳ ಶ್ರೀಮಂತನಿಗಾಗಲಿ, ಬಹಳ ಬಡವನಿಗಾಗಲಿ ಕನ್ಯೆಯನ್ನು ಕೊಡಬಾರದು. ವರನೊಬ್ಬನು ಸುಂದರನಾಗಿದ್ದರೂ ಕನ್ಯೆಗೆ ಬೇಡವೆನಿಸಿದರೆ, ಅವಳ ಶ್ರೇಯಸ್ಸನ್ನು ಗಮನಿಸಿ, ಅವಳನ್ನು ಬಲವಂತಪಡಿಸಿ ಧಾರೆಯೆರೆಯಬಾರದು. ಮಕ್ಕಳನ್ನು ಐದು ವರ್ಷ ತುಂಬುವವರೆಗೆ ರಾಜಕುಮಾರನಂತೆ ನೋಡಿಕೊಳ್ಳಬೇಕು. ಅಲ್ಲಿಂದ ಮುಂದಕ್ಕೆ ಹತ್ತುವರ್ಷ ಸೇವಕನಂತೆ ನಿಯಂತ್ರಿಸಿ ಕಾಪಾಡಬೇಕು. ಹದಿನಾರುವರ್ಷ ತುಂಬಿದ ಬಳಿಕ ''ಇವನು ನನ್ನ ಗೆಳೆಯ'' ಎಂಬಂತೆ ಆದರದಿಂದ ನಡೆಸಿಕೊಳ್ಳಬೇಕು. ಗೃಹ ಸ್ಥನು ಪಾಪಕರ್ಮಗಳಿಂದ ದೂರವಿರಬೇಕು. ಅವನು ಯಾರನ್ನೂ ಬೇಡಬಾರದು. ಬಲಿಯನ್ನು ಬೇಡಲು ಹೋಗಿ ಮಹಾವಿಷ್ಣುವೇ ಕುಬ್ಜನಾಗಿಬಿಟ್ಟನು ಎಂಬುದನ್ನು ತಿಳಿಯಬೇಕು. ಯಾರನ್ನೂ ತಿರಸ್ಕಾರದಿಂದ ಕಾಣಬಾರದು. ಸಾರ್ಥಕವಾಗಿದ್ದ ಪಕ್ಷದಲ್ಲಿ ಮಕ್ಕಳ ಸಲಹೆಗಳನ್ನೂ ಮಾತುಗಳನ್ನೂ ಉಪಯೋಗಿಸಿಕೊಳ್ಳ ಬೇಕು. ಮಡದಿಯನ್ನು ಪಡೆದ ಬಳಿಕ ಮಗನು ತಂದೆತಾಯಿ ಗಳನ್ನು ಉಪೇಕ್ಷೆಮಾಡಬಾರದು. ಹಿರಿಯರಿಗೆ ತಲೆಬಾಗುತ್ತ, ನಿತ್ಯವೂ ಅವರ ಸೇವೆ ಮಾಡುವವನಿಗೆ ಆಯುಷ್ಯ, ವಿದ್ಯೆ, ಯಶಸ್ಸು ಮತ್ತು ಬಲ — ಎಂಬಿವು ಹೆಚ್ಚಾಗಿ ಅಭಿವೃದ್ಧಿ ಹೊಂದು ತ್ತವೆ. ಸೋಮಾರಿತನವಿರಬಾರದು. ಲಕ್ಷ್ಮಿಯು ಸೋಮಾರಿಯ ಬಳಿ ನಿಲ್ಲುವುದಿಲ್ಲ. ಆಲಸ್ಯದಿಂದ ಅಮೃತವೂ ವಿಷವಾಗುತ್ತದೆ.

**ಭಗವಂತನ ಪ್ರೇಮದ ಗಳಿಕೆ:** ಗೃಹಸ್ಥನು ಮೊದಲಿಗೆ ಭಗವಂತನ ಪ್ರೇಮವನ್ನು ಗಳಿಸಿಕೊಳ್ಳಬೇಕು. ಆಮೇಲೆ ಜನರ ಪ್ರೇಮವನ್ನು ಗಳಿಸಿಕೊಳ್ಳುವುದೇನೂ ಕಷ್ಟವಾಗುವುದಿಲ್ಲ. ತೀರ್ಥ ಯಾತ್ರೆ ಮಾಡಬೇಕು. ಅದು ಅಗ್ನಿಷ್ಟೋಮವೇ ಮುಂತಾದ ಯಾಗಗಳನ್ನು ಮಾಡಿದ್ದಕ್ಕಿಂತಲೂ ಹೆಚ್ಚು ಪುಣ್ಯಫಲವನ್ನು ತಂದುಕೊಡುತ್ತದೆ. ಸತ್ಸಂಗ ಮಾಡದಿದ್ದರೆ ಅದು ಗೃಹಸ್ಥಾಶ್ರಮಕ್ಕೆ ಅಪಚಾರವೆಸಗಿದಂತೆಯೇ ಸರಿ. ಸತ್ಸಂಗವೆಂಬುದು ಸಂಸಾರದಲ್ಲಿ ಬಳಲಿಬೆಂಡಾದವರಿಗೆ ವಿಶ್ರಾಂತಿಸ್ಥಾನವಾಗುತ್ತದೆ. ನಾನು ಒಬ್ಬನೇ ಹುಟ್ಟಿದೆ, ಅಂತೆಯೇ ನಾನು ಒಬ್ಬನೇ ಸಾಯುತ್ತೇನೆ, ಪಾಪಪುಣ್ಯಗಳನ್ನು ನಾನೊಬ್ಬನೇ ಉಣ್ಣುತ್ತೇನೆ ಎಂಬ ಭಾವವಿರಬೇಕು. ಸೂರ್ಯನು ಉದಯಕಾಲದಲ್ಲಾಗಲಿ, ಅಸ್ತಮಯಕಾಲದಲ್ಲಾಗಲಿ ಕೆಂಪಾಗಿಯೇ ಇರುವಂತೆ, ಸಜ್ಜನರಾದ ಗೃಹಸ್ಥನು ಸಂಪತ್ತು ವಿಪತ್ತುಗಳಲ್ಲಿ ಏಕಪ್ರಕಾರವಾಗಿರಬೇಕು. ಪ್ರಪಂಚದಲ್ಲಿ ಎಲ್ಲವೂ ದೈವಾಯತ್ತವಾಗಿರುವುದರಿಂದ ತನಗೆ ದೊರಕಿದ್ದರಿಂದಲೇ ಸಂಸಾರಿಕರು ತೃಪ್ತರಾಗಬೇಕು. ಅಸೂಯೆ, ಲೋಭ, ಮದ, ಕೋಪ, ಭೀತಿ ಮತ್ತು ದುಡುಕು ಎಂಬಿವು ಗೃಹಸ್ಥರು ಕೈಗೊಳ್ಳುವ ಕಾರ್ಯಗಳಿಗೆ ಅಡಚಣೆಯುಂಟುಮಾಡುತ್ತವೆಯಾದ್ದರಿಂದ ಅವುಗಳನ್ನು ನಿಯಂತ್ರಿಸಿಕೊಳ್ಳಬೇಕು. ಮನಸ್ಸನ್ನು ದ್ವೇಷರಹಿತವಾಗಿ, ಹೂವಿನಂತೆ ಕಾಪಾಡಿಕೊಳ್ಳಬೇಕು. ದಾನವೆಂಬುದು ಅತ್ಯಂತ ಶ್ರೇಷ್ಠವಾದ ಗುಣ. ದಾನಮಾಡದಿದ್ದರೆ ದರಿದ್ರರಾಗಿ ಹುಟ್ಟಬೇಕಾಗುತ್ತದೆ. ಲೋಕದಲ್ಲಿ ಪರೋಪಕಾರವು ತಂದೆಗೆ ಸಮಾನ, ದಯೆ ತೋರುವುದು ತಾಯಿಗೆ ಸಮಾನ.

**ಗೃಹಸ್ಥರು ಪಾಪದೂರರಾಗಿರಬೇಕು:** ಗೃಹಸ್ಥರು ಪಾಪ ಕಾರ್ಯಗಳಿಂದ ದೂರವಿರಬೇಕು. ಕಳ್ಳತನವೆಂಬುದು ಮರಣಕ್ಕೆ ಸಮಾನ. ಎಲ್ಲಾ ಪಾಪಗಳೂ ಒಂದು ತೂಕವಾಗಿದ್ದರೆ ಮದ್ಯಪಾನವೇ ಒಂದು ತೂಕ. ಸಾಲಗಾರನಾಗಬಾರದು. ಸಾಲಗಾರಿಕೆಯೆಂಬುದು ನಿದ್ರಾಸುಖವನ್ನು ಹಾಳುಮಾಡುತ್ತದೆ. ಹೆಣ್ಣು ಕೊಟ್ಟ ಮಾವನ ಕಡೆಯಿಂದ ಧನವನ್ನಾಗಲಿ, ಅವನ ಬೆಂಬಲದಿಂದ ಕೀರ್ತಿಪ್ರಸಿದ್ಧಿಗಳನ್ನಾಗಲಿ ಪಡೆಯಲು ಯತ್ನಿಸಿದರೆ, ಅದು ಹೀನವರ್ತನೆಯೆನಿಸುತ್ತದೆ. ಕೋಪವನ್ನು ಗೆದ್ದರೆ ಇಡೀ ವಿಶ್ವವನ್ನೇ ಗೆಲ್ಲಬಹುದು. ಲೋಕಾಚಾರವನ್ನು ಅನುಸರಿಸಲೇಬೇಕು. ಇಬ್ಬರು ಹೆಂಡಿರನ್ನು ಮಾಡಿಕೊಂಡವನು ಕುಸಿದುಬೀಳುತ್ತಾನೆ. ಕೃಷಿಯಲ್ಲಿ ಅನಾದರವನ್ನು ತೋರದೆ ಗೃಹಸ್ಥರು, ಕಠಿಣವಾದ ಭೂಮಿಯಾದರೂ ಸರಿಯೆ, ಬಿತ್ತಿಬೆಳೆಯಲು ಪ್ರಯತ್ನಿಸಿದರೆ, ಅಲ್ಲಿ ಭಗವಂತನೇ ತೋರಿಕೊಳ್ಳುತ್ತಾನೆ. ಧರ್ಮಜ್ಞನೂ ಶೀಲಸಂಪನ್ನನೂ ಆದವನು ಯಾವ ವರ್ಣಕ್ಕೆ ಸೇರಿದ್ದರೂ ಸರಿಯೆ, ಗೃಹಸ್ಥನು ಅವನನ್ನು ಗೌರವಿಸಬೇಕು. ಕಷ್ಟದಲ್ಲಿದ್ದೇವೆಂದು ನೀತಿಧರ್ಮಗಳನ್ನು ಕಡೆಗಣಿಸಬಾರದು. ಧರ್ಮಮಾರ್ಗದಿಂದ ಧನಸಂಪಾದನೆ ಮಾಡುತ್ತ, ತನ್ನ ಮಡದಿಯಲ್ಲಿ ಮಾತ್ರವೇ ಅನುರಕ್ತನಾಗಿರುತ್ತ, ಅತಿಥಿಸತ್ಕಾರ ಪ್ರಿಯರಾಗಿರುತ್ತ ಬಾಳುವ ಗೃಹಸ್ಥರಿಗೆ ಮನೆಯಲ್ಲಿಯೇ ಮೋಕ್ಷವು ಕೈವಶವಾಗುತ್ತದೆ. ಆಸೆಬುರುಕತನದಿಂದ ಅತಿಯಾದ ಸಂಪತ್ತನ್ನು ಗಳಿಸಿ ಲೋಭಿಯಾದರೆ, ಅದು ಜೇನುಹುಳುಗಳು ಕೂಡಿಟ್ಟ ಜೇನು ತುಪ್ಪದಂತೆ ಪರರ ಪಾಲಾಗುತ್ತದೆ.

**ಜೀವಲೋಕದ ಸುಖಗಳು:** ಶಾಂತಿ, ಕ್ಷಮೆ, ದಾನ ಮತ್ತು ದಯೆ — ಈ ನಾಲ್ಕನ್ನು ಸೇರಿಸಿ ಶೀಲ ಎನ್ನುತ್ತಾರೆ. ಗೃಹಸ್ಥರು ಶೀಲವಂತರಾಗಬೇಕು. ಹಿರಿಯಣ್ಣನನ್ನು ತಂದೆಗೆ ಸಮಾನವೆಂದು ಕಾಣಬೇಕು. ಅಳಿಯಂದಿರಿಗೆ ಮಾವನ ಮನೆ ಸ್ವರ್ಗವೆನಿಸಿದರೂ ಅಲ್ಲಿ ಹೆಚ್ಚುಕಾಲ ಬಿಡಾರ ಹೂಡಬಾರದು. ದ್ರವ್ಯ, ವಸ್ತ್ರ, ಪ್ರೀತಿ, ಶ್ರದ್ಧೆ, ಸವಿನುಡಿ — ಇವುಗಳಿಂದ ಮಡದಿಯರನ್ನು ಸತತವಾಗಿ ಸಂತೋಷಪಡಿಸಬೇಕು. ಅವರಿಗೆ ಅಪ್ರಿಯವಾದುದನ್ನು ಆಚರಿಸಬಾರದು. ಅವರು ಕುಸುಮಕೋಮಲೆಯರಾದ್ದರಿಂದ ನಯನಾಜೂಕಿನಿಂದ ನಡೆಸಿಕೊಳ್ಳಬೇಕು. ಜೀವನೋಪಾಯಕ್ಕೆ ಬೇಕಾಗುವಷ್ಟು ಹಣ ಸಂಪಾದನೆಯಾಗಬೇಕು. ಪ್ರೀತಿಪೂರ್ಣವಾದ ಮಾತುಗಳನ್ನಾಡುವ ಮಡದಿಯಿರಬೇಕು, ವಿಧೇಯರಾದ ಮಕ್ಕಳಿರಬೇಕು, ಆರೋಗ್ಯಪೂರ್ಣವಾದ ಶರೀರವಿರಬೇಕು — ಜೀವಲೋಕಕ್ಕೆ ಇವೇ ಸುಖಗಳು ಎಂದು ಸುಭಾಷಿತಕಾರರು ಗೃಹಸ್ಥ ಜೀವನದ ಸುಖಾದರ್ಶಕ್ಕೊಂದು ಭರತವಾಕ್ಯವನ್ನೇ ಬರೆದು ಬಿಟ್ಟಿದ್ದಾರೆ.

ಬೆಚ್ಚನೆಯ ಮನೆಯಾಗಿ ವೆಚ್ಚಕ್ಕೆ ಹೊನ್ನಾಗಿ ।
ಇಚ್ಛೆಯನರಿತು ನಡೆವ ಸತಿಯಾಗೆ ಸ್ವರ್ಗಕ್ಕೆ ।
ಕಿಚ್ಚು ಹಚ್ಚೆಂದ ಸರ್ವಜ್ಞ ॥

ಎಂಬ ಸರ್ವಜ್ಞವಾಣಿಯು ನೂರಕ್ಕೆ ನೂರು ಆ ಭರತವಾಕ್ಯಕ್ಕೆ ಅನುರೂಪವಾಗಿಯೇ ಇದೆ.

**ಪತಿವ್ರತೆಯರಿದ್ದ ಮನೆಯಲ್ಲಿ ನಿತ್ಯೋತ್ಸವ:** ಗಂಡನಿಗೆ ಪ್ರಿಯಳಾದ ಹೆಂಡತಿಯಿರುವ ಮನೆಯಲ್ಲಿ ನಿತ್ಯೋತ್ಸವದ ಸಂತಸವಿರುತ್ತದೆ. ಗಂಡನೇ ದೇವರು, ಅವನೇ ಗುರು, ಅವನೇ ವ್ರತನಿಯಮಗಳು, ಅವನೇ ತೀರ್ಥಕ್ಷೇತ್ರಗಳು — ಎಂದು ಭಾವಿಸುತ್ತ ಗೃಹಿಣಿಯರು ಪತಿಸೇವೆಯಲ್ಲಿ ತತ್ಪರರಾಗಿರಬೇಕು. ಗಂಡನಿಗಿಂತ ಮೊದಲು ಊಟಮಾಡುವುದು, ಅಸೂಯಾಪರತೆ, ಒಡಕುನುಡಿ, ಕುಟುಕು ನುಡಿ, ಹೆಚ್ಚು ಅಲ್ಲಲ್ಲಿ ಅಲೆದಾಡುವುದು - ಮುಂತಾದ ದೋಷಗಳಿಂದ ಗೃಹಿಣಿಯರು ದೂರವಿರಬೇಕು. ಕಠಿಣವಾದ ನುಡಿಯೆಂಬುದು ಆಯುಧದ ಪೆಟ್ಟಿಗಿಂತಲೂ ಪ್ರಬಲವಾಗಿರುತ್ತದೆ.

**ಅನ್ನಪೂರ್ಣೆಯಿರದಿದ್ದರೆ ಗತಿಯೇನು:** ಬಹುಬಗೆಯ ಶಾಸ್ತ್ರಗಳನ್ನೋದಿ ಪುರುಷರು ಪಾಂಡಿತ್ಯವನ್ನು ಗಳಿಸಿಕೊಳ್ಳಬೇಕು. ಆದರೆ ಶುಕ್ರಾಚಾರ್ಯರಾಗಲಿ, ಬೃಹಸ್ಪತಿಗಳಾಗಲಿ ಬರೆದಂತಹ ಶಾಸ್ತ್ರಗಳು, ಗೃಹಿಣಿಯರ ಬುದ್ಧಿಯೊಳಗೆ ಸ್ವಾಭಾವಿಕವಾಗಿಯೇ ಪ್ರತಿಷ್ಠಿತವಾಗಿರುತ್ತದೆ. ಶಿವನಿಗೆ ಐದುಮುಖ, ದಿಗಂಬರ ಬೇರೆ, ಮಶಾಣದಲ್ಲಿಯೇ ಅಲೆದಾಡುತ್ತಿರುತ್ತಾನೆ. ಒಬ್ಬ ಮಗನಿಗೆ ಆನೆಯ ಮುಖ, ಇನ್ನೊಬ್ಬ ಮಗನಿಗೆ ಆರು ಮುಖ. ಅನ್ನಪೂರ್ಣೆಯೊಬ್ಬಳು ಇರದಿದ್ದರೆ ಆ ಮನೆಯ ಕಥೆ ಏನಾಗುತ್ತಿತ್ತೋ

ಎಂದು ಸುಭಾಷಿತಕಾರರು ಹಾಸ್ಯರಸಕ್ಕೆ ಪೋಷಕವಾಗಿ ಹೇಳಿದ್ದರೂ, ಕುಟುಂಬವು ಎಷ್ಟೇ ಅಸ್ತವ್ಯಸ್ತವಾಗಿದ್ದರೂ ಅದು ಸಹ್ಯವಾಗುವುದು ಜಾಣೆಯರಾದ ಗೃಹಿಣಿಯರಿಂದಲೇ ಎಂಬುದು ನಿಶ್ಚಯವಾಗುತ್ತದೆ. ಗೃಹಿಣಿಯರಿಗೆ ಸುಖವೆಂಬುದೇ ಇಲ್ಲ. ಪತಿಯ ಸುಖವೇ ಅವರ ಸುಖ. ಶೂರನ ಪರೀಕ್ಷೆ ರಣರಂಗದಲ್ಲಿ ನಡೆಯುವಂತೆ, ಗೃಹಿಣಿಯರ ಪರೀಕ್ಷೆಯು ಅವರ ಗಂಡ ಬಡವನಾದಾಗ ನಡೆಯುತ್ತದೆ. ಸಾಧ್ವಿಯರಿಗೆ ದೇವತೆಗಳೇ ಆಪತ್ಕಾಲದಲ್ಲಿ ರಕ್ಷಣೆಕೊಡುತ್ತಾರೆ. ಗೃಹಸ್ಥಜೀವನದಲ್ಲಿ ಹೆಂಡತಿಯು ಅನುಕೂಲಳಾಗಿದ್ದರೆ ಇಲ್ಲಿಯೇ ಸ್ವರ್ಗ, ಪ್ರತಿಕೂಲಳಾಗಿದ್ದರೆ ಇಲ್ಲಿಯೇ ನರಕ ಎಂದು ಸುಭಾಷಿತಕಾರರು ಕೊಟ್ಟಿರುವ ತೀರ್ಪು, ಸುಪ್ರೀಂಕೋರ್ಟಿನ ತೀರ್ಮಾನವೇ ಸರಿ!

### ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಗೃಹಸ್ಥಜೀವನದ ಆದರ್ಶ

ಕನ್ನಡದಲ್ಲಿ ಅತ್ಯಂತ ಪುರಾತನವಾದ, ಸಮೃದ್ಧವಾದ ಜನಪದ ಸಾಹಿತ್ಯವಿದೆ. ಅದರಲ್ಲಿ ಗೃಹಸ್ಥ ಜೀವನದ ಆದರ್ಶಕ್ಕೆ ಸಂಬಂಧಿಸಿದ ಅಪೂರ್ವವಾದ ಸಂಗತಿಗಳಿವೆ. ಅವೆಲ್ಲವೂ ನಮ್ಮ ಸನಾತನ ಪರಂಪರೆಗೆ ಹೊಂದಿಕೊಂಡತೆಯೇ ಇದ್ದು, ನಮ್ಮ ಜನಪದರು ಅವುಗಳನ್ನು ತಮ್ಮ ಬದುಕಿಗೆ ಜೋಡಿಸಿಕೊಂಡೇ ಲೋಕಕ್ಕೆ ತಿಳಿಸಿ ಕೊಟ್ಟಿದ್ದಾರೆ. ವಿವಾಹಮಂಟಪದಲ್ಲಿ ಕುಳಿತವರನ್ನು ನಮ್ಮ ಗ್ರಾಮಸ್ಥರು ''ಇವರು ಸೀತಾರಾಮರಿದ್ದಂತೆ, ಇವರು ಶಿವಪಾರ್ವತಿಯರಿದ್ದಂತೆ, ಇವರು ಸತ್ಯಭಾಮೆ-ಕೃಷ್ಣರಿದ್ದಂತೆ'' ಎಂದೇ ಭಾವಿಸುತ್ತಾರೆ. ತಮ್ಮ ಜನನಮರಣಗಳಾಗಲಿ, ತಮ್ಮ ಸುಖದುಃಖಗಳಾಗಲಿ ತಮ್ಮ ಆರೋಗ್ಯ-ಅನಾರೋಗ್ಯಗಳಾಗಲಿ, ತಮ್ಮ ಜಯಾಪಜಯಗಳಾಗಲಿ, ತಮ್ಮ ಸಿರಿತನ-ಬಡತನಗಳಾಗಲಿ ಎಲ್ಲವೂ ಭಗವಂತನ ಅಧೀನವೆಂದು ಭಾವಿಸಿ, ಅವರು ಸಂಪೂರ್ಣವಾಗಿ ತಮ್ಮ ಬದುಕನ್ನು ಭಗವಂತನಿಗೇ ಸಮರ್ಪಿಸಿಕೊಂಡು ಬಾಳಲು ಪ್ರಯತ್ನಿಸುತ್ತಾರೆ. ತಮ್ಮ ಮಗಳು ಅತ್ತೆಯ ಮನೆಯಲ್ಲಿ ಹೇಗೆ ನಡೆದುಕೊಳ್ಳಬೇಕು ಎಂಬುದನ್ನು ತಂದೆತಾಯಿಗಳು ಸೂಕ್ತವಾಗಿ ಉಪದೇಶಿಸುತ್ತಾರೆ. ''ಅತ್ತೆಯ ಮನೆಯಲ್ಲಿ ಮುತ್ತಿನಂತೆ ಇರಬೇಕು. ತಡವಾಗಿ ಉಣಲಿಕ್ಕಿದರೂ ತಾಳ್ಮೆಯಿಂದಿರಬೇಕು. ಅತ್ತೆಮಾವಂದಿರಿಗೂ ಗಂಡನಿಗೂ ನೆರಹೊರೆಯ ಜನರಿಗೂ ಅಂಜಿ ಬಾಳಬೇಕು. ಕುಟುಂಬವನ್ನು ಒಡೆಯುವ ಮಾತುಗಳನ್ನಾಡಬಾರದು. ತನ್ನ ಕೆಟ್ಟವರ್ತನೆಯಿಂದ ಅವಳು ತನ್ನ ಗಂಡನ ಮನೆಗಾಗಲಿ, ತೌರುಮನೆಗಾಗಲಿ ಅಪಕೀರ್ತಿಯನ್ನು ತರಬಾರದು. ಸಿರಿಬಂದಕಾಲಕ್ಕೆ ತಲೆಬಾಗಿ ನಡೆಯಬೇಕು'' ಎಂದು ಬೋಧಿಸುತ್ತಾರೆ.

**ಹಬ್ಬಲಿ ಅವರ ರಸಬಳ್ಳಿ:** ಗೃಹಿಣಿಯು ಬೆಳಗಿನ ಜಾವ ಹಾಸುಗೆಯಿಂದ ಮೇಲೇಳುತ್ತಿದ್ದಂತೆಯೇ ತನ್ನ ಅತ್ತೆಮಾವಂದಿರ, ತನ್ನ ತಂದೆತಾಯಿಯರ ಮತ್ತು ತನ್ನ ಗಂಡನ ಶ್ರೀಪಾದಗಳನ್ನು ನೆನೆಯಬೇಕು. ಅದರ ಫಲವಾಗಿ ಕೈಲಾಸವು ಅವಳ ಬೆನ್ನ ಹಿಂದೆಯೇ ಇರುತ್ತದೆ. ಬಡತನವಿದ್ದರೂ ಚಿಂತೆಯಿಲ್ಲ. ಬಹಳ ಮಕ್ಕಳಿರಬೇಕು ಎಂದು ಗ್ರಾಮೀಣ ಗೃಹಿಣಿಯು ಅಪೇಕ್ಷಿಸುತ್ತಾಳೆ. ಆ ಮಕ್ಕಳಲ್ಲಿ ಅವಳು ತನ್ನ ಪತಿಯ ಪ್ರತಿಬಿಂಬವನ್ನೇ ಕಾಣುತ್ತಾಳೆ. ಬಂಜೆಯಾಗಿಬಿಟ್ಟರಂತೂ ಅವಳು ಪಡುವ ಸಂಕಟಕ್ಕೆ ತುದಿಮೊದಲೇ ಇರುವುದಿಲ್ಲ. ''ಬೆಳಗ್ಗೆ ಮಗುವನ್ನು ಕೊಡು, ನಿನಗೆ ಇಚ್ಛೆಯಿಲ್ಲದಿದ್ದರೆ ಸಂಜೆಗೇ ಆ ಮಗುವನ್ನು ನೀನೇ ತೆಗೆದುಕೊಂಡುಬಿಡು, ಏನಾದರಾಗಲಿ, ನನಗೆ ಅಂಟಿರುವ ಬಂಜೆ ಶಬ್ದವನ್ನು ಬಿಡಿಸಿಬಿಡು'' ಎಂದು ಅವಳು ಭಗವಂತನನ್ನು ಬೇಡುತ್ತಾಳೆ. ಗಂಜಿ ಕುಡಿದುಕೊಂಡಿದ್ದರೂ ಚಿಂತೆಯಿಲ್ಲ, ಗಂಡನ ಮನೆಯಲ್ಲಿ ಲೇಸಾಗಿ ಬಾಳಬೇಕು ಎಂದು ಭಾವಿಸುವ ಗೃಹಿಣಿಯು, ತನ್ನ ತೌರುಮನೆಯ ಸಂತಾನದ ರಸಬಳ್ಳಿಯು, ನದಿಯ ತೀರದ ಗರಿಕೆಯ ಹುಲ್ಲಿನಂತೆ ಹಬ್ಬುತ್ತಿರಲಿ ಎಂದು ಹಾರೈಸುತ್ತಾಳೆ. ತಂದೆಯ ನೆನಪಿನಿಂದ ದುಃಖಗಳಿದ್ದರೆ ಮರೆಯುತ್ತ, ತಾಯಿಯ ನೆನಪಿನಿಂದ ಮನಸ್ಸನ್ನು ನಿರ್ಮಲಗೊಳಿಸಿಕೊಳ್ಳುತ್ತ ದಿನಗಳೆಯುತ್ತಾಳೆ. ಒಮ್ಮೆ ತನ್ನ ತಾಯಿಯನ್ನು ನೆನೆದರೆ ಸಾಕು, ಕಾಶೀಯಾತ್ರೆ ಮಾಡಿದ ಪುಣ್ಯವೇ ಲಭಿಸುತ್ತದೆಂದು ಹಿಗ್ಗುತ್ತಾಳೆ.

**ಅಂಗಿಯಾ ಮೇಲಂಗಿ ಛಂದೇನೊ ನನರಾಯ:** ತನ್ನ ಹೆಂಡತಿ ಬಲು ಸುಂದರಿಯಾಗಿದ್ದಾಳೆಂದು ಪುರುಷನು ಅವಳ ಮೋಹಕ್ಕೆ ಸಿಲುಕಬಾರದು. ಅತ್ತಿಯ ಹಣ್ಣು ಮೇಲೆ ಕೆಂಪಗಿದ್ದರೂ ಅದರೊಳಗೆ ಹುಳುಗಳು ತುಂಬಿರುವಂತೆ, ಆ ಸುಂದರಿಯ ದೆಸೆಯಿಂದ ಕುಟುಂಬದ ಸಾಮರಸ್ಯವು ಕದಡದಂತೆ ಎಚ್ಚರ ವಹಿಸಬೇಕು. ''ಸೊಸೆಯನ್ನು ಮನೆದುಂಬಿಸಿಕೊಳ್ಳುತ್ತೇನೆ'' ಎಂದು ಸಂಭ್ರಮದಿಂದ ಬೀಗಿದ ಆ ಅತ್ತೆಯು ತರುವಾಯದಲ್ಲಿ ''ಅಯ್ಯೋ, ನನ್ನ ಸೊಸೆಯು ನನ್ನ ಮಗನನ್ನು ನನ್ನ ಕೈಯಿಂದ ಕಸಿದುಕೊಂಡು ನನ್ನನ್ನು ಗೋಳುಗುಟ್ಟಿಸುತ್ತಿದ್ದಾಳಲ್ಲಾ'' ಎಂದು ಮುಗಿಲಿಗೆ ಬಾಯಿಬಿಡುವಂತಾಗಬಾರದು. ಯಜಮಾನನು ಜೂಜು ಮುಂತಾದ ದುಶ್ಚಟಗಳಿಗೆ ಬಲಿಬೀಳಬಾರದು. ಪಾಂಡವರಾಗಲಿ, ನಳಮಹಾರಾಜನಾಗಲಿ ಜೂಜಿನ ವ್ಯಸನಕ್ಕೆ ಸಿಲುಕಿ ಪಟ್ಟಪಾಡನ್ನು ನೆನೆದು ಅದರಿಂದ ಪಾಠ ಕಲಿಯಬೇಕು. ರಂಭೆಯಂತೆ ತಾನು ಸುಂದರಿಯಾಗಿದ್ದರೂ ತನ್ನ ಗಂಡನು ಇನ್ನೊಬ್ಬಳನ್ನು ಮದುವೆಯಾಗಲು ಮುಂದಾದರೆ ಆ ಗೃಹಿಣಿಯು ಕಸಿವಿಸಿಗೊಳ್ಳುತ್ತಾಳೆ. ''ಅಂಗಿಯ ಮೇಲಂಗಿಯನ್ನು ತೊಡುವುದೇಕೊ? ರಂಭೆಯನ್ನು ತರುವುದೇಕೋ ನನ್ನ ರಾಯ? ಅದು ಮನೆಯ ಸುಖಶಾಂತಿಗಳನ್ನು ಕದಡುವುದಿಲ್ಲವೇ'' ಎಂದು ನಯವಾಗಿ ಪ್ರಶ್ನಿಸುತ್ತ ಅವನನ್ನು ಸರಿದಾರಿಗೆ ತರಲು ಯತ್ನಿಸುತ್ತಾಳೆ. ಪುರುಷನು ಸೂಳೆಯ ಸಹವಾಸ ಮಾಡಬಾರದು. ಅದರ ಸುಳಿಗೆ ಸಿಲುಕಿದವನು ಆ ಸೂಳೆಯ ಕಾಲಿನ ಕೆರಹಾಗಿ ಪತನ ಹೊಂದುತ್ತಾನೆ. ಗಂಡಹೆಂಡಿರ ನಡುವೆ ಜಗಳಕಲಹಗಳಾದರೂ ಅದು ಗಂಧವನ್ನು ತೇದಂತೆ ಸುಖಾಂತವಾಗಬೇಕು. ಉಂಡು ಮಲಗುವುದರೊಳಗೆ ಶಮನವಾಗಿಬಿಡಬೇಕು. ಹೀಗೆಲ್ಲ ಕನ್ನಡ ಜನಪದಸಾಹಿತ್ಯದಲ್ಲಿ ಗೃಹಸ್ಥ ಜೀವನದ ಆದರ್ಶದ ಸ್ಪೃಹಣೀಯ ನೋಟಗಳಿವೆ. ''ಕರುಣೆ ಬಂದರೆ ಕಾಯೊ ಮರಣ

ಬಂದರೆ ಒಯ್ಯೊ। ಕರುಣಿ ಕಲ್ಯಾಣಿ ಬಸವಣ್ಣ। ಕಡೆತನಕ ಕಾಯೊ ಅಭಿಮಾನ॥'' ಎಂಬುದೇ ಉತ್ತುಂಗ ಆದರ್ಶ.

### ಕನ್ನಡ ಮಾರ್ಗಸಾಹಿತ್ಯದ ಆದರ್ಶಗಳು

**ಹದಿಬದೆಯ ಧರ್ಮ:** ಪಂಪನಿಂದ ತೊಡಗಿ ಇಂದಿನವರೆಗೂ ಕನ್ನಡ ಮಾರ್ಗಸಾಹಿತ್ಯ ಪರಂಪರೆಯಲ್ಲಿ ಗೃಹಸ್ಥಜೀವನದ ಆದರ್ಶಗಳ ಚಿತ್ರಣವು ಹಿತಮಿತವಾಗಿ ನಡೆದುಬಂದಿದೆ. ಆ ಪೈಕಿ ಸಂಚಿಯ ಹೊನ್ನಮ್ಮನೆಂಬ (೧೬೮೦) ಕವಯಿತ್ರಿಯ 'ಹದಿಬದೆಯ ಧರ್ಮ'ವೆಂಬ (= ಪತಿವ್ರತೆಯ ಧರ್ಮ) ಸಾಂಗತ್ಯ ಕಾವ್ಯವು ವಿಚಾರಕ್ಕೆ ಯೋಗ್ಯವಾಗಿದೆ. ''ರಾಮಾಯಣ, ಮಹಾಭಾರತ, ಭಾಗವತ, ಮನುಧರ್ಮಶಾಸ್ತ್ರ ಮೊದಲಾದ ಗ್ರಂಥಗಳನ್ನೇ ಮುಂದಿಟ್ಟುಕೊಂಡು ನಾನು ಸತಿಧರ್ಮವನ್ನು ನಿರೂಪಿಸುತ್ತಿದ್ದೇನೆ'' ಎಂದು ಕವಯಿತ್ರಿಯೇ ತಿಳಿಸಿದ್ದಾಳೆ. ಗೃಹಿಣಿಯು ಮನೆಯನ್ನೇ ಧರ್ಮಾಶ್ರಮವೆಂದೂ ಪತಿಯನ್ನೇ ಪರದೇವತೆಯೆಂದೂ ಭಾವಿಸಿ ಸೇವೆಮಾಡಬೇಕು. ವ್ರತ, ಹೋಮ, ಉಪವಾಸ, ದಾನ ಮುಂತಾದ ಧರ್ಮಗಳಿಗಿಂತ ಪತಿಶುಶ್ರೂಷೆಯು ಮಿಗಿಲಾದುದಾಗಿದೆ. ಪ್ರತಿಮೆಯ ರೂಪದಲ್ಲಿರುವ ದೇವರೇ ಜೀವಂತಮೂರ್ತಿಯಾಗಿ, ಪತಿರೂಪದಲ್ಲಿ ಸೇವೆ ಮಾಡಲು ನನಗೆ ದೊರಕಿದ್ದಾನೆ ಎಂದು ಸತಿಯು ಸಂತೋಷ ಪಡಬೇಕು. ಅತ್ತೆಮಾವಂದಿರನ್ನು ವೃದ್ಧರೆಂದು ಜರೆಯದೆ, ಅವರ ಚಿತ್ತವರಿತು ಉಪಚರಿಸಬೇಕು. ಕೂಗಿ ನುಡಿಯುವುದಾಗಲಿ, ಕೊಬ್ಬಿ ಕೋಪಿಸಿಕೊಳ್ಳುವುದಾಗಲಿ ಸಲ್ಲದು. ಪತಿಯು ಪರದೇಶಕ್ಕೆ ಹೋಗಿರುವಾಗ ಆ ನಾರೀಮಣಿಯು, ಪತಿಯ ಕ್ಷೇಮವನ್ನೇ ಚಿಂತಿಸುತ್ತ, ತಾನು ಹೆಚ್ಚಿನ ಸುಖದಲ್ಲಿ ಓಲಾಡದೆ, ಹೊಸ್ತಿಲಿನಿಂದ ಹೊರಕ್ಕೆ ಹೋಗದೆ, ಪತಿಯ ಬರವನ್ನೇ ಹಾರೈಸುತ್ತಿರಬೇಕು. ತನ್ನ ಪತಿಯ ಬಂಧುಬಳಗದವರ ನ್ನೆಲ್ಲ ಆದರದಿಂದ ಕಾಣಬೇಕು.

**ತಂದೆತಾಯಿಗಳ ಕರ್ತವ್ಯ:** ಗೃಹಿಣಿಯ ತಂದೆತಾಯಿಗಳು ತಮ್ಮ ಮಗಳನ್ನು ಕುರಿತು ಎಲ್ಲ ಪರಿಸ್ಥಿತಿಗಳಲ್ಲಿಯೂ ಪತಿಗೃಹದವರನ್ನೇ ಅನುಸರಿಸಿಕೊಂಡು ನಡೆಯಬೇಕೆಂದು ಉಪದೇಶ ನೀಡಬೇಕೇ ಹೊರತು, ಬೀಗರ ಮನೆಯ ವಿರುದ್ಧ ಅವಳನ್ನು ಎತ್ತಿಕಟ್ಟಿ ಕೊಬ್ಬಿಸಬಾರದು. 'ಕೊಟ್ಟ ಹೆಣ್ಣು ಕುಲಕ್ಕೆ ಹೊರಗು' ಎಂದು ಉಪೇಕ್ಷಿಸದೆ, ವಿಶೇಷ ಪರ್ವಗಳಲ್ಲಿ ಆಕೆಯನ್ನು ಮನೆಗೆ ಬರಮಾಡಿಕೊಂಡು ಆದರಿಸಬೇಕು. ಅವಳಿಗೆ ತಮ್ಮ ಕೈಲಾದ ಒಡವೆವಸ್ತ್ರಗಳನ್ನೂ ಮಿಕ್ಕ ವಸ್ತುಗಳನ್ನೂ ಕೊಟ್ಟು ಸಂತೋಷಪಡಿಸಬೇಕು. ಅಂತೆಯೇ ಗೃಹಿಣಿಯು ತನ್ನ ಮನೆಯ ಶುಭಕಾರ್ಯಗಳಿಗೆ ತನ್ನ ತಂದೆತಾಯಿಗಳನ್ನೂ ಬಂಧುಬಳಗದವರನ್ನೂ ಬರಮಾಡಿಕೊಂಡು ಸೂಕ್ತವಾಗಿ ಉಪಚರಿಸಿ ಸನ್ಮಾನಿಸಬೇಕು. ಅತ್ತೆಯರು ತಮ್ಮ ಸೊಸೆಯರನ್ನು ಪ್ರೇಮದಿಂದ ಪಾಲಿಸಬೇಕು. ಅವರನ್ನು ಕಾಡದೆ, ನಿಂದಿಸದೆ, ಕೋಟಲೆಗೊಳಿಸದೆ ತಮ್ಮ ಮಗಳಂತೆಯೇ ಭಾವಿಸಿ ಅಕ್ಕರೆಯಿಂದ ನೋಡಿಕೊಳ್ಳಬೇಕು. ಅಂದಂದಿಗೆ ಅವರಿಗೆ ಬೇಕಾಗುವ ಉಡಿಗೆ ತೊಡಿಗೆಗಳಲ್ಲಿ, ಊಟಉಪಚಾರಗಳಲ್ಲಿ ಅವರಿಗೆ ಯಾವುದೇ ಕೊರತೆಯಾಗದಂತೆ ರಕ್ಷಿಸಬೇಕು. ಈ ಸೊಸೆಯರು ತಮ್ಮ ತಂದೆತಾಯಿಗಳನ್ನೂ ಬಂಧುಬಳಗದವರನ್ನೂ ತೊರೆದು ಈ ಮನೆಗೆ ಬಂದಿದ್ದಾರಲ್ಲವೇ ಎಂಬ ಮರುಕದ ಭಾವವಿರಬೇಕು. ತಾವೇ ಅವರಿಗೆ ಅಲಂಕಾರಮಾಡಿ, ಕಣ್ತುಂಬ ನೋಡಿ ಹರ್ಷದಿಂದ ಹಿಗ್ಗಬೇಕು.

**ಗೃಹಿಣಿಯರ ಕೀರ್ತಿಲತೆ:** ತನ್ನ ಮನೆಗೆಲಸದವರೇನಾದರೂ ತಪ್ಪುಮಾಡಿದರೆ, ತನ್ನ ಮಕ್ಕಳ ವಿಷಯದಲ್ಲಿ ಹೇಗೋ ಹಾಗೆ ಅವರನ್ನು ಕ್ಷಮಿಸಬೇಕು. ಪರಹಿಂಸೆಮಾಡದೆ, ಪರಧನಕ್ಕಾಸೆಪಡದೆ, ಪರಪುರುಷನತ್ತ ನೋಡದೆ, ಪತಿಸೇವೆಮಾಡುವ ಪತಿವ್ರತೆಯರು ಪರಮಪದವನ್ನು ಸೇರುತ್ತಾರೆ. ಸೀತಾದೇವಿಯು ಶ್ರೀರಾಮನನ್ನು, ಪಾಂಚಾಲಿಯು ಪಾಂಡವರನ್ನು, ಅರುಂಧತಿಯು ವಸಿಷ್ಠರನ್ನು, ಅನಸೂಯೆಯು ಅತ್ರಿಮುನಿಗಳನ್ನು, ಲೋಪಾಮುದ್ರೆಯು ಅಗಸ್ತ್ಯರನ್ನು ಅನುಸರಿಸಿ ಪತಿಪ್ರಾಣರಾಗಿ ಬಾಳಿದರು. ಅವರ ಬದುಕೇ ಮಿಕ್ಕ ಸಾಧ್ವಿಯರಿಗೆ ಮೇಲ್ಪಂಕ್ತಿಯಾಗಬೇಕು. ಎಳವೆಯಲ್ಲಿ ತಂದೆ ತಾಯಿಗಳ, ನಡುಹರೆಯದಲ್ಲಿ ಪತಿರಾಯನ, ಕಡುಮುಪ್ಪಿನ ಕಾಲದಲ್ಲಿ ತನ್ನ ಮಕ್ಕಳ ಆಶ್ರಯದಲ್ಲಿರುವುದೇ ತನಗೆ ಶ್ರೇಯಸ್ಕರವೆಂದು ಸತಿಯರು ಭಾವಿಸಬೇಕು.

**ಪತಿವ್ರತೆಯರ ಪುಣ್ಯಪ್ರಭಾವ:** ಲೋಕದಲ್ಲಿರುವ ಸುಚರಿತೆಯರ ಪಾದಧೂಳಿಯಿಂದ ಈ ಭೂಮಂಡಲವು ಪಾವನವಾಗುತ್ತದೆ. ವಾಯುದೇವರು ಅವರ ಚರಣಧೂಳಿಯನ್ನು ತನ್ನ ಮುಡಿಯಲ್ಲಿ ಧರಿಸಲು ಇಷ್ಟಪಡುತ್ತಾನೆ. ಭಕ್ತರ ಪಾಪಗಳನ್ನು ಹೊತ್ತುಕೊಂಡ ಪುಣ್ಯನದಿಗಳು ಈ ಸಾಧ್ವಿಯರ ಪಾದಸ್ಪರ್ಶದಿಂದ ತಮ್ಮ ಪಾಪಗಳನ್ನೆಲ್ಲ ಕಳೆದುಕೊಳ್ಳಲು ಕಾತರಿಸುತ್ತವೆ. ಪತಿವ್ರತೆಯರ ತೇಜಸ್ಸಿನ ಬಲದಿಂದಲೇ ಸೂರ್ಯನು ಲೋಕವನ್ನು ಬೆಳಗಿಸುತ್ತಿದ್ದಾನೆ. ಅವನ ರಥವು ಮುರಿಯದೆ, ಅವನ ರಥದ ಕುದುರೆಗಳು ಮುಗ್ಗರಿಸದೆ, ಅವನು ತನ್ನ ಕರ್ಮವನ್ನು ನೆರವೇರಿಸುವುದು ಸಾಧ್ಯವಾಗಿದೆ. ಕಾಲಕಾಲಕ್ಕೆ ಮಳೆಬೆಳೆಗಾಗುತ್ತಿರುವುದಕ್ಕಾಗಲಿ ಭೂಮಿಯು ಕುಸಿದುಬೀಳದೆ ಜಗತ್ತನ್ನೆಲ್ಲ ಹೊತ್ತು ಪಾಲಿಸುತ್ತಿರುವುದಕ್ಕಾಗಲಿ, ಪತಿವ್ರತೆಯರ ಪುಣ್ಯಪ್ರಭಾವವೇ ಕಾರಣವಾಗಿದೆ. ತಾನೊಬ್ಬ ಸಾಧ್ವಿಯಾಗಿ, ಲೋಕಾನುಭವ ಸಂಪನ್ನೆಯಾಗಿ, ಹೊನ್ನಮ್ಮನು ಮಂಡಿಸಿರುವ ಗೃಹಸ್ಥಧರ್ಮದ ಈ ಆದರ್ಶಗಳು ಮನನಯೋಗ್ಯವಾಗಿವೆ.

### ಆಧುನಿಕ ಸಾಹಿತ್ಯದ ಆದರ್ಶಗಳು

**ಒಲವೆ ನಮ್ಮ ಬದುಕು:** ವೇದಗಳ ಕಾಲದಿಂದ ಇಳಿದು ಬಂದ ಗೃಹಸ್ಥಜೀವನದ ಪವಿತ್ರತೆಯ ಒಳನೋಟಗಳು ಆಧುನಿಕ ಕನ್ನಡ ಸಾಹಿತ್ಯದಲ್ಲಿಯೂ ಹಬ್ಬಿಹರಡಿವೆ. ದ.ರಾ.ಬೇಂದ್ರೆಯವರ 'ನಾನು ಬಡವಿ' ಎಂಬ ಕವಿತೆಯಲ್ಲಿ ಗೃಹಿಣಿಯೊಬ್ಬಳು ''ಬಡತನವು ನಮ್ಮ ಬದುಕನ್ನು ಆವರಿಸಿದ್ದರೂ ನಮ್ಮ ನಡುವೆ ಇರುವ ಪ್ರೇಮವೇ ನಮ್ಮ ಸಂಪತ್ತಾಗಿದೆ. ನನ್ನ ಯಜಮಾನನು ನನ್ನಿಂದ ದೂರವಿರುವಾಗಲೂ, ಅವನ ಮೂರ್ತಿಯು ಮಾತ್ರ ನನ್ನ

ಕಣ್ಣನ್ನು ತುಂಬಿಕೊಂಡಿರುತ್ತದೆ. ಅವನೇ ನನ್ನ ಓಲೆಭಾಗ್ಯವಾಗಿದ್ದಾನೆ. ನನ್ನ ಗರ್ಭಕ್ಕೆ ಜೀವಫಲವನ್ನು ಕೊಟ್ಟುದೇ ಅವನು ನನಗೆ ಕೊಟ್ಟ ದೊಡ್ಡ ಒಡವೆಯಾಗಿದೆ'' ಎಂದೆಲ್ಲ ಅವಳು ಹರ್ಷಪಡುವುದರಲ್ಲಿ, ಸಾಧ್ವಿಯ ಮನೋಧರ್ಮವು ಪ್ರಕಟವಾಗಿದೆ. 'ನನ್ನ ಗೌರಿ' ಎಂಬ ಕವಿತೆಯಲ್ಲಿ ಬೇಡರೆಡ್ಡಿಹಳ್ಳಿ ಪಂಪಣ್ಣ ಎಂಬ ಕವಿವರ್ಯರು, ''ನನ್ನ ಮಡದಿ ಗೌರಿಯು ಸಿಟ್ಟುಸಿಡುಕುಗಳಿಲ್ಲದ ಶಾಂತಮೂರ್ತಿಯಾಗಿದ್ದಾಳೆ. ಮನೆಯ ಕೆಲಸಗಳಲ್ಲಾಗಲಿ, ಕೃಷಿ ಕಾರ್ಯಗಳಲ್ಲಾಗಲಿ ಅವಳು ಸ್ವಲ್ಪವೂ ಬೇಸರವಿಲ್ಲದೆ ಸಾಗುತ್ತಾಳೆ. ನಡೆನುಡಿಗಳಲ್ಲಿ ಲಕ್ಷ್ಮೀದೇವಿಯಂತಿದ್ದು, ಮನೆಯನ್ನು ಒಂದು ದೇವಮಂದಿರದಂತೆ ಕಾಪಾಡಿಕೊಂಡಿದ್ದಾಳೆ. ಸಿರಿತನವನ್ನಾಗಲಿ, ಒಡವೆಗಿಡವೆಗಳನ್ನಾಗಲಿ ಬಯಸದೆ, 'ಬಡತನವೇ ನಮಗಿರಲಿ, ಪ್ರೀತಿಪ್ರೇಮಗಳಿಗೆ ಕೊರತೆಯಿಲ್ಲದಿರಲಿ' ಎಂದು ಹೇಳುತ್ತಾಳೆ. ಅವಳ ಪಾಲಿಗೆ ತಂದೆತಾಯಿ ಬಂಧುಬಳಗ ಎಲ್ಲವೂ ನಾನೇ ಆಗಿದ್ದೇನೆ'' ಎಂದು ಹಾಡಿದ್ದಾರೆ. ಅದು ಸನಾತನ ಪರಂಪರೆಯ ಸಾಧ್ವೀಮಣಿಯ ಆದರ್ಶವನ್ನೇ ಪುನರುಚ್ಚರಿಸಿದಂತಿದೆ. ಕೆ.ಎಸ್.ನರಸಿಂಹಸ್ವಾಮಿಯವರು 'ನಿನ್ನೊಲುಮೆ' ಎಂಬ ಕವಿತೆಯಲ್ಲಿ ''ನಿನ್ನ ಒಲುಮೆಯೇ ನನ್ನ ಬಾಳಿನ ಬೆಳಕಾಗಿದೆ. ನನ್ನ ಜೀವನಯಾತ್ರೆಯ ಕನಸುಗಳೆಲ್ಲ ನಿನ್ನಿಂದಲೇ ನನಸಾಗಿವೆ. ನಿನ್ನ ನಿರ್ಮಲವಾದ ನಡೆನುಡಿಗಳಿಂದಲೇ ನನ್ನ ಮನೆಯ ಬದುಕು ಎತ್ತರಕ್ಕೇರಿದೆ'' ಎಂದು ಮೆಚ್ಚಿಕೊಂಡಿರುವಲ್ಲಿ, ಗಣ್ಯ ಗೃಹಿಣಿಯ ಆದರ್ಶವೇ ಪ್ರತಿಫಲಿತವಾಗಿದೆ.

**ಎರಡು ಮನೆಗಳ ಕೀರ್ತಿ:** ವಿ. ಸೀತಾರಾಮಯ್ಯ ಅವರ 'ಮನೆ ತುಂಬಿಸುವುದು' ಎಂಬ ಕವಿತೆಯಲ್ಲಿ ಮದುವೆ ಮಾಡಿಕೊಟ್ಟ ತಮ್ಮ ಮಗಳನ್ನು ಪತಿಗೃಹಕ್ಕೆ ಒಪ್ಪಿಸುವ ಹೊತ್ತಿನಲ್ಲಿ, ಆ ತಂದೆತಾಯಿಗಳು ಹೇಳುವ ಮಾತುಗಳಲ್ಲಿ ಗೃಹಸ್ಥಜೀವನದ ಆದರ್ಶಗಳೇ ಇಡಿಕಿರಿದಿವೆ. ''ನಮ್ಮ ಮನೆಯಂಗಳದಲ್ಲಿ ಬೆಳೆದ ಈ ಹೂವನ್ನು ನಿಮ್ಮ ಮಡಿಲಿಗೆ ಒಪ್ಪಿಸುತ್ತಿದ್ದೇವೆ. ನಮ್ಮ ಮನೆಯ ಈ ಬೆಳಕು ಮುಂದಕ್ಕೆ ನಿಮ್ಮ ಮನೆಯನ್ನು ಬೆಳಗುತ್ತದೆ. ನಮ್ಮ ಕುಲಕ್ಕೆ ಹೊರಗಾಗಿ ಬಂದಿರುವ ಇವಳು ನಿಮ್ಮ ಕುಲವನ್ನು ಬೆಳೆಸುತ್ತಾಳೆ. ಇವಳ ಸೌಜನ್ಯದಿಂದ ನಿಮ್ಮ ಮನೆತನದ ಕೀರ್ತಿ ಹಬ್ಬುತ್ತದೆ.'' ಎಂದು ಬೀಗಬೀಗಿತಿಯರಲ್ಲಿ ಅರಿಕೆ ಮಾಡಿಕೊಳ್ಳುತ್ತಾರೆ. ತರುವಾಯ ತಮ್ಮ ಮಗಳನ್ನು ಕುರಿತು ''ಇಲ್ಲಿಂದ ಮುಂದಕ್ಕೆ ಇವರೇ ನಿನಗೆ ತಾಯಿತಂದೆಗಳಾಗುತ್ತಾರೆ. ನಿನ್ನ ಭಾಗ್ಯವನ್ನು ಬೆಳೆಸುತ್ತಾರೆ. ಇವರು ಪೂಜಿಸುವ ದೇವರುಗಳೇ ನಿನ್ನ ದೇವರುಗಳಾಗುತ್ತಾರೆ. ಎರಡೂ ಮನೆಗಳ ಕೀರ್ತಿ ನಿನ್ನಿಂದ ವಿಸ್ತಾರಗೊಳ್ಳಲಿ. ಪತಿಯೊಡನೆ ಸಂತಸದಿಂದ ದೀರ್ಘಾಯುಷಿಯಾಗಿ ನೀನು ಬಾಳುವಂತಾಗಲಿ'' ಎಂದು ಹಾರೈಸುತ್ತಾರೆ.

**ಗಾಯಂತಿ ದೇವಾಃ ಕಿಲ ಗೀತಕಾನಿ:** ಸನಾತನ ಪರಂಪರೆಯನ್ನು ಆಧರಿಸಿ ನಡೆದುಬಂದಿರುವ ನಮ್ಮ ಗೃಹಸ್ಥಧರ್ಮದ ಆದರ್ಶಗಳು ದೇವತೆಗಳನ್ನೂ ಮರುಳುಗೊಳಿಸುತ್ತಿವೆಯೆಂದು 'ವಿಷ್ಣುಪುರಾಣ'ವು ಹೇಳುತ್ತಿದೆ. ''ಭಾರತ ದೇಶದಲ್ಲಿ ಹುಟ್ಟಿದ ಮನುಷ್ಯರೇ ಧನ್ಯರು. ಏಕೆಂದರೆ ಅಲ್ಲಿ ಸ್ವರ್ಗವನ್ನು ಪಡೆದುಕೊಳ್ಳುವುದಕ್ಕಾಗಲಿ ಅಥವಾ ಮೋಕ್ಷವನ್ನೇ ಪಡೆದುಕೊಳ್ಳುವುದಕ್ಕಾಗಲಿ ಸೂಕ್ತವಾದ ಮಾರ್ಗವುಂಟು. ಯೋಗಕ್ಕೆ ವಿರುದ್ಧವಾಗದಂತೆ ಭೋಗವನ್ನು ಜೋಡಿಸಿಕೊಂಡು, ಈ ದೇವಜನ್ಮವನ್ನು ನೀಗಿಕೊಂಡು, ಆ ರಾಷ್ಟ್ರದಲ್ಲಿ ನಾವು ಮನುಷ್ಯರಾಗಿ ಹುಟ್ಟುವುದು ಯಾವಾಗ'' ಎಂದು ಸದಾಕಾಲ ಅವರು ಭಾರತದ ಗುಣಗಾನ ಮಾಡುತ್ತಲೇ ಇರುತ್ತಾರೆ.

### ಸಹಾಯಕ ಗ್ರಂಥಗಳು


೧. *ಅಮರವಾಣಿ, ಸಂಪುಟ ೨, ಶ್ರೀರಂಗಮಹಾಗುರು, ಅಷ್ಟಾಂಗಯೋಗ ವಿಜ್ಞಾನ ಮಂದಿರ, ಮೈಸೂರು. ೧೯೮೩.*

೨. *ವೇದಜ್ಯೋತಿ, ಸ್ವಾಮಿ ಅಚ್ಯುತಾನಂದ ಸರಸ್ವತಿ, ಆರ್ಯ ಸಮಾಜ, ಮೈಸೂರು, ೧೯೯೫*

೩. *ಶ್ರೀಮದ್ವಾಲ್ಮೀಕಿ ರಾಮಾಯಣಂ, ಅಯೋಧ್ಯಾಕಾಂಡ, ಅನುವಾದಕರು, ಎನ್ ರಂಗನಾಥಶರ್ಮಾ, ಬೆಂಗಳೂರು, ೧೯೬೭*

೪. *ಹರಿವಂಶ, ಸಂಪುಟ ೨, ಭಾರತದರ್ಶನ ಪ್ರಕಾಶನ, ಬೆಂಗಳೂರು, ೨೦೦೧*

೫. *ಶ್ರೀವಿಷ್ಣುಪುರಾಣಂ, ಸಂಪುಟ ೧, ಎನ್ ರಂಗನಾಥಶರ್ಮಾ, ಶ್ರೀರಾಮಕೃಷ್ಣ ಆಶ್ರಮ, ಬೆಂಗಳೂರು, ೧೯೮೬.*

೬. *ಸಂಸ್ಕೃತ ಲೋಕೋಕ್ತಿಗಳು ಮತ್ತು ಕವಿಸೂಕ್ತಿಗಳು, ಎಚ್. ಎಸ್. ಅಚ್ಚಪ್ಪ, ಮೈಸೂರು. ೧೯೮೩*

೭. *ಜನಪದ ಗೀತಾಂಜಲಿ, ದೇ.ಜವರೇಗೌಡ, ಸಾಹಿತ್ಯ ಅಕಾಡೆಮಿ, ನವದೆಹಲಿ. ೧೯೭೮*

೮. *ಹದಿಬದೆಯ ಧರ್ಮ, ಡಿ. ಚಂಪಾಬಾಯಿ, ಮೈಸೂರು ವಿಶ್ವವಿದ್ಯಾನಿಲಯ, ೧೯೮೦*

೯. *ಕನ್ನಡ ಕಾವ್ಯಗಳ ಗೆಜ್ಜೆನಾದ, ಎ.ವಿ. ಸೂರ್ಯನಾರಾಯಣಸ್ವಾಮಿ ಮತ್ತು ಎಚ್.ಎಸ್ ಗೋವಿಂದೇಗೌಡ. ಹನ್ಯಾಳು ಪ್ರಕಾಶನ, ಮೈಸೂರು, ೨೦೦೬.*


**ಸಂಪದೋ ಜಲತರಂಗವಿಲೋಲಾ**
**ಯೌವನಂ ತ್ರಿಚತುರಾಣಿ ದಿನಾನಿ ।**
**ಶಾರದಾಭ್ರಪರಿಪೇಲವಮಾಯುಃ**
**ಕಿಂ ಧನೈಃ ಪರಹಿತಾನಿ ಕುರುಧ್ವಮ್ ॥**

'ನೀರಿನ ಅಲೆಗಳಂತೆ ಐಶ್ವರ್ಯವು ಚಂಚಲವಾದದ್ದು; ಯೌವನ ಮೂರು ನಾಲ್ಕು ದಿನಗಳು ಇರುವಂಥದ್ದು; ಆಯುಷ್ಯವಾದರೋ ಶರತ್ಕಾಲದ ಮೋಡ ದಂತೆ ಅತ್ಯಲ್ಪ ಕಾಲವಿರುವಂಥದ್ದು. ಹೀಗಿರಲು ಹಣದಿಂದೇನು? ಇತರರಿಗೆ ಒಳ್ಳೆಯದನ್ನು ಮಾಡಿ.'

— *ಸುಭಾಷಿತಸುಧಾನಿಧಿ*